# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಶಶಿಪ್ರಭಾ ಪರಿಣಯ
# (ಮೇಧಾವಿ ಕಾಳಗ)

ಕವಿ

## ಪೆರ್ಡೂರು ರಘುರಾಮ ಮಲ್ಯ

ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ನವೆಂಬರ್ ೧೫, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com


## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಟಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಟಾಜೆ ಗಣೇಶ ಭಟ್

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಿಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಮಹಾಭಾರತ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಶ್ರೀಮನ್ಮಧ್ವಸಿದ್ಧಾಂತ ಪ್ರಬೋಧಿನಿ ಪುಸ್ತಕ ಭಂಡಾರ, ಉಡುಪಿ - ೧೯೪೯

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೪೧೯

**ಪಾತ್ರಗಳು:**

ಪದ್ಮ ಶೇಖರ (ಪದ್ಮಾಖ್ಯಪುರದರಸು), ಪದ್ಮಿನಿ (ಪತ್ನಿ), ಸತ್ಕೀರ್ತಿ (ಸಚಿವ), ಮಾರ್ತಾಂಡತೇಜ, ಕಮಲ ಧ್ವಜ, (ಮಕ್ಕಳು), ಮಾಂಡವ್ಯ ಮುನಿ, ದೀರ್ಘಾಕ್ಷ( ಕಿರಾತ), ವನಪಾಲಕಿ, ಶಶಿಪ್ರಭೆ (ರಾಣಿ), ಭ್ರಮರ ಕುಂತಲೆ (ಮಂತ್ರಿ), ಕಮಲಗಂಧಿನಿ (ಸೇನಾನಿ), ಘೋರರೂಪಿ (ರಾಕ್ಷಸ), ಮೇಧಾವಿ (ಕೇರಳಾಧಿಪತಿ), ಚಿತ್ರಭಾನು (ಪತ್ನಿ), ನಕ್ಷತ್ರ ಧ್ವಜ (ಮಂತ್ರಿ), ವನಪಾಲಕರು, ಶ್ರೀದೇವಿ

**ಕಥಾ ಸಾರಾಂಶ:**

ಪದ್ಮಾಖ್ಯಪುರದರಸು ಪದ್ಮಶೇಖರನಿಗೆ ಮಾರ್ತಾಂಡತೇಜ ಹಾಗೂ ಕಮಲಧ್ವಜ ಎಂಬ ಇಬ್ಬರು ಮಕ್ಕಳು. ಅವರ ವಿವಾಹಕ್ಕಾಗಿ ಕನ್ಯಾನ್ವೇಷಣೆ ಮಾಡುವಂತೆ ಮಂತ್ರಿಯಾದ ಸತ್ಕೀರ್ತಿಗೆ ಸೂಚನೆ. ಆಗ ಅಲ್ಲಿಗೆ ಆಗಮಿಸಿದ ಮಕ್ಕಳು ತಮಗೆ ವಿವಾಹ ಬೇಡವೆಂದೂ, ಧರೆಯ ದಿಗ್ವಿಜಯಕ್ಕೆ ಅಪ್ಪಣೆ ಕೊಡಿರೆನ್ನುವರು. ಅಂತೆಯೇ ದೇಶಾಟನೆ ಮಾಡುವಾಗ ನಿಮಗೆ ಯೋಗ್ಯರಾದ ಕನ್ಯೆಯರನ್ನು ಅರಸಿ, ವಿವಾಹವಾಗಿರೆಂದು ಅರಸನ ಅನುಮತಿ. ತಾಯಿಯಾದ ಪದ್ಮಿನಿಗೆ ತಿಳಿಸಿ ಹೊರಟ ಅಣ್ಣತಮ್ಮಂದಿರು ಬೇರೆಬೇರೆಯಾಗಿ ತೆರಳುವರು. ಮಾರ್ತಾಂಡತೇಜನಿಗೆ ಮಾಂಡವ್ಯಮುನಿಯ ಅನುಗ್ರಹ. ದೀರ್ಘಾಕ್ಷನೆಂಬ ಕಿರಾತನಿಂದ ಕಮಲಧ್ವಜನ ನಿಗ್ರಹ. ಆಗ ಮುನಿವಚನದಂತೆ ಅಲ್ಲಿಗೆ ಬಂದ ಮಾರ್ತಾಂಡತೇಜ ಕಿರಾತನನ್ನು ಮಡುಹಿ, ತಮ್ಮನನ್ನು ಬಿಡಿಸಿ ನಂತರ ಇಬ್ಬರೂ ಒಂದಾಗಿ ಸ್ತ್ರೀರಾಜ್ಯಕ್ಕೆ ಬರುತ್ತಾರೆ. ಅಲ್ಲಿಗರಸಿ ಶಶಿಪ್ರಭೆ. ವನಪಾಲಕಿಯಿಂದ ಇವರ ಆಗಮನದ ವರ್ತಮಾನ ಕೇಳಿದ ಅರಸಿ, ಅವರ ಬಂಧನಕ್ಕಾಗಿ ಮಂತ್ರಿಣಿ ಭ್ರಮರಕುಂತಳೆ ಹಾಗೂ ಸೇನಾನಿ ಕಮಲಗಂಧಿನಿಯರಿಗೆ ಅಪ್ಪಣೆ ಕೊಡುವಳು. ಯುದ್ಧದಲ್ಲಿ ಕಮಲಧ್ವಜನಿಗೆ ಸೋಲು, ನಂತರ ಬಂದ ಮಾರ್ತಾಂಡತೇಜನಿಗೆ ಮಂತ್ರಿಣಿ ಮನಸೋಲುತ್ತಾಳೆ. ಅವನ ಸಂಗಡವೇ ಇರುತ್ತಾಳೆ. ಸೇನಾನಿಯಿಂದ ಈ ವಿಚಾರ ತಿಳಿದ ರಾಣಿ ಶಶಿಪ್ರಭೆ ತಾನು ಕಾಳಿಯನ್ನು ಭಜಿಸಿ ವರರೂಪವಾಗಿ ಪಡೆದ ವರಹಮಾಲೆ ಧರಿಸಿ ಘೋರರೂಪಿಯೆಂಬ ರಕ್ಕಸನನ್ನು ಸ್ಮರಿಸಿ ಅವನ ಮೂಲಕ ಭ್ರಮರಕುಂತಳೆಯನ್ನು ಹಿಡಿದು ತರಿಸಿ ಶಿಕ್ಷಿಸುತ್ತಾಳೆ. ಕೈ ಕಾಲು ಕಣ್ಣು ಕಟ್ಟಿ, ಕಾಂತಾರದಲ್ಲಿ ಹಾಳುಬಾವಿಗೆ ಅವಳನ್ನು ನೂಕಿಸುತ್ತಾಳೆ. ಅಲ್ಲಿಗೆ ಬಂದ ಮಾರ್ತಾಂಡತೇಜ, ಕಮಲಧ್ವಜ ಅವಳನ್ನು ಕಾಪಾಡುತ್ತಾರೆ. ಅವಳಿತ್ತ ಅದೃಶ್ಯಾಂಜನ ಧರಿಸಿ, ಯಾರಿಗೂ ಕಾಣದಂತೆ ಮಾರ್ತಾಂಡತೇಜ ಅಂತಃಪುರ ಪ್ರವೇಶಿಸಿ, ಶಶಿಪ್ರಭೆಯ ಹಾರ ಅಪಹರಿಸುತ್ತಾನೆ. ನಂತರ ಹಾರಕ್ಕಾಗಿ ಯುದ್ಧ, ಯುದ್ಧದಲ್ಲಿ ರಾಣಿಗೆ ಸೋಲುಂಟಾಗುವುದು. ಸಹಾಯಕ್ಕಾಗಿ ಧಾವಿಸಿದ ಅವಳ ಮಾವ ಕೇರಳಾಧಿಪ ಮೇಧಾವಿಯೂ ಧುರದಲ್ಲಿ ಸಾಯುವನು. ಕೊನೆಯಲ್ಲಿ ಶ್ರೀದೇವಿ ಮೈದೋರಿ, ಶಶಿಪ್ರಭೆ

ಮತ್ತು ಭ್ರಮರಕುಂತಳೆಯನ್ನು - ಮಾರ್ತಾಂಡತೇಜನಿಗೂ, ಹಾಗೂ ಕಮಲಗಂಧಿನಿಯನ್ನು - ಕಮಲಧ್ವಜನಿಗೂ, ವಿವಾಹಮಾಡಿಸುವ ಅತಿರೋಚಕ ಕಥಾನಕ.

**ಕವಿ ಪರಿಚಯ : (ಆಧಾರ: ಕರ್ನಾಟಕ ಕವಿ ಚರಿತ್ರೆ – ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)**

ರಘುರಾಮ ಮಲ್ಯರು ಉಡುಪಿ ಹತ್ತಿರದ ಪೆರ್ಡೂರಿನವರು. ಜನನ ೧೯೦೦ರಲ್ಲಿ. ಗೌಡ ಸಾರಸ್ವತ ಸಮುದಾಯಕ್ಕೆ ಸೇರಿದವರು. ಹೆಚ್ಚಿನ ವಿವರ ಲಭ್ಯವಿಲ್ಲ.

ಇವರು ಬರೆದ ಪ್ರಸಂಗಗಳು: ಮೇಧಾವಿ ಕಾಳಗ ಅಥವಾ ಶಶಿಪ್ರಭಾ ಪರಿಣಯ

**ಟಿಪ್ಪಣಿ :**

ಬಯಲಾಟ ಮತ್ತು ತಾಳಮದ್ದಲೆ ಎರಡರಲ್ಲೂ ಹೆಚ್ಚು ಪ್ರದರ್ಶನಗೊಳ್ಳುವ ಪ್ರಸಂಗ.

# ಪ್ರಸಂಗ ಸಾಹಿತ್ಯ

**ಶಾರ್ದೂಲವಿಕ್ರೀಡಿತವೃತ್ತ**
ಶ್ರೀನಾಥಂ ಕರುಣಾರ್ಣವಂ ಬುಧಜನರ್ಗಾನಂದಹೃದ್ವಿಗ್ರಹಂ |
ನಾನಾಶಾಸ್ತ್ರ ಪುರಾಣವೇದಸ್ಮೃತಿಯೊಳ್ ತಾನಾದಿಕರ್ತೆನಿಸಿಹಂ ||
ಧ್ಯಾನಾಚಿತ್ತನಿವಾಸನಾಗಿ ಜಗದೊಳ್ ದಶಮಂಗುಲಂ ಪೆರ್ಚಿಹಂ |
ಶ್ರೀನಾರಾಯಣ ದಿವ್ಯಮೂರ್ತಿಪದಮಂ ಧ್ಯಾಯಾಮ್ಯಹಂ ಸಂತತಂ || ೧ ||  || 1 ||

**ನಾಟಿ - ಝಂಪೆ**
ಜಯತು ಜಯ ಗೋವಿಂದ | ಜಯ ಸಚ್ಚಿದಾನಂದ |
ಜಯತು ಸುರವರನಮಿತ | ಜಯತು ಸುಪ್ರೀತ ||
ಜಯತು ಜಯ ಜಯತು || ಪ ||
ವನಜಬಾಂಧವ ದೇವ | ನನುರೂಪ ಸದ್ಭಾವ |
ಮನುಮಥನ ಪ್ರಿಯ ತಾತ | ಹನುಮ ಸಂಸ್ತುತ್ಯ || ಜಯತು || ೧ ||

ದುರಿತಾರಣ್ಯಹುತಾಶ | ಶರಣಾಗತರ ಪೋಷ ||
ಪೊರೆಯೋ ಶ್ರೀ ಜಗದೀಶ | ಸ್ಮರಿಪೆ ದಶವೇಷ || ಜಯತು || ೨ ||

ಮೂರು ಮೂರ್ತಿಸ್ವರೂಪ | ಚಾರು ಗುಣಗಳ ದೀಪ ||
ಕೋರುವೆನು ತವ ಪದವ | ತೋರು ಸದ್ವಿಧವ || ೩ ||  || 4 ||

**ಘಂಟಾರವ - ಆದಿ**
ಶರಣರಕ್ಷಕ ನಿನ್ನ | ಚರಣಕ್ಕೆರಗುವೆ ನಾ | ಪದ್ಮನಾಭ || ಯನ್ನ |
ಕರುಣದಿ ರಕ್ಷಿಸು | ಪರಮ ಪಾವನ ದೇವ | ಪದ್ಮನಾಭ || ೧ ||

ಪಂಕಜನಾಭ ಶ್ರೀ | ಪಂಕಜ ವದನನೇ | ರಕ್ಷಿಸೆನ್ನ | ಪದ |
ಪಂಕಜಕ್ಕೆರಗುವೆ | ಕಿಂಕರಜನ ಪ್ರೀಯ | ರಕ್ಷಿಸೆನ್ನ || ೨ ||

ಅಂಬುಜೋದ್ಭವತಾತ | ಕಂಬುಕಂಧರಪ್ರೀತ | ತ್ರಾಹಿ ತ್ರಾಹೀ | ತವ |
ನಂಬಿದವರ ಹೃದ | ಯಾಂಬುಧಿಚಂದಿರ | ತ್ರಾಹಿ ತ್ರಾಹೀ || ೩ ||

ಪಾಲಾಬ್ಧಿಶಯನ ಶ್ರೀ | ಲೋಲ ಮಂಗಲರೂಪ | ಪಾಲಿಸೆನ್ನ | ಭಕ್ತ |
ಪಾಲಕ ಭವಭಯ ಕಾರ | ನಿವಾರಕ | ಪಾಲಿಸೆನ್ನ || ೪ ||  || 8 ||

**ಸುರುಟಿ - ಆದಿ**
ಕರುಣಿಸು ಗಜವದನ | ಶರಣರ |
ಪೊರೆವ ದಯಾಸದನ ||
ಕರುಣಾಕರ ತವ | ಚರಣಾಂಬುರುಹಕೆ |
ಸೆರಗೊಡ್ಡುತಲಾ | ನೆರಗುವೆನನುದಿನ || ಪ ||
ಮೂಷಿಕವಾಹನನೇ | ನಮಿಸುವೆ |
ಪಾಶಾಂಕುಶಧರನೇ ||
ಶೇಷಭೂಷ ಸುವಿ | ಲಾಸಿಯೆ ತವ ಪದ |
ದಾಸನಾಗಿಹೆ ಜಗ | ದೀಶ ವಿಭಾಸ್ಯನೇ || ೧ ||

ನಂಬಿದವರ ಕಾವ | ಭಕ್ತ ಕು |
ಟುಂಬಿ ಬೆನಕದೇವ ||
ಅಂಬಾಸುತ ರ | ಕ್ತಾಂಬರಭೂಷಿತ |
ನಂಬಿದೆ ತವಪದ | ವಿಂಬುಗೊಟ್ಟನುದಿನ || ೨ ||

ಧರೆಯೊಳಧಿಕವಾದ | ಶಿರಾಲೆಯ |
ಪುರದೊಳು ನೆಲಸಿರ್ದ ||
ವರಗಣಪತಿ ಕರುಣದಿ ನಂಬಿದ ಕಿಂ |
ಕರನಿಗೊಲಿದು ಮನ | ದಿರವನು ಪಾಲಿಸು || ೩ || || 11 ||

**ಭಾಮಿನಿ**

ವಿವರಗಮನನ ಶಯನ ಹಾಸಿಗೆ |
ಯವನು ಧರಿಸೀರ್ದವಳ ಕನ್ಯೆಯ |
ಭುವನದೊಳು ಕದ್ದೊಯ್ದ ಖೂಳನ ವನವ ಪುಡಿಗೈದು ||
ಬವರಕೊದಗಿದ ಖಳರ ಬಡಿದಾ |
ಜವನಗರಿಯನೆ ಕಾಣಿಸುತಲತಿ |
ಜವದಿ ಪುರವನೆ ಸುಟ್ಟ ಮಾರುತಿಗೆರಗಿ ನುತಿಸುವೆನು || ೧ || || 12 ||

**ನಾದನಾಮಕ್ರಿಯೆ - ಮಟ್ಟೆ**

ಭಜಿಸುವೆ ಸತತದಿ ವಾಣಿಯ |
ನಜಪ್ರಿಯೆ ಸುರವ್ರಜ ಮಾನ್ಯೆಯ |
ಸುಜನಜನೌಘ ಸುಪೋಷೆಯ |
ತ್ರಿಜಗತ್ಪಾವನೆಯ || ಪ ||
ವೀಣಾಧಾರಣ ಪಾಣಿಯ |
ಕ್ಷೋಣಿಯ ಕರ್ತನ ರಾಣಿಯ ||
ವಾಣಿಯ ನುತಿಸುವೆ ಕೃತಿಯೊಳು |
ನಾಣ್ನುಡಿ ಮಾಣೆನುತ || ಭಜಿಸುವೆ || ೧ ||

ಆಡುವ ನುಡಿಗಳ ಸಮ ಜೊತೆ |
ಕೂಡಿಸಿ ಕೊಡುತಲಿ ರಸನದಿ ||
ಹಾಡಿಸಿ ರಸಿಕರಿಗುಲ್ಲಸ |
ಮೂಡಿಸಿ ಪೊರೆ ಯೆನುತಾ || ಭಜಿಸುವೆ || ೨ ||

ಕಮಲಾಸನಪ್ರೀತೆಯ ಪದ |
ಕಮಲಕೆ ವಂದಿಪೆ ಖ್ಯಾತೆಯ |
ಸುಮನಸದಾತೆಯ ಪೊಗಳುವೆ |
ಸುಮನಸ್ಸ್ತ್ರೀಯೆನುತ || ಭಜಿಸುವೆ || ೩ || || 15 ||

**ಭಾಮಿನಿ**

ಶಾರದೆಯ ಭಜಿಸುತ್ತ ಸುಮನಸ |
ವಾರಕಭಿವಂದಿಸುತ ಪಿತೃಚರ |
ಣಾರವಿಂದಕೆ ನಮಿಸಿ ಮಾತೆಯ ಸ್ಮರಿಸಿ ಗುರುವರರ ||
ಚಾರುಪದಕೊಂದಿಸುತ ಮುನಿಜನ |
ಧೀರ ಕವಿಗಳ ನುತಿಸಿ ಧರೆಯೊಳು |
ಕಾರಣಿಕ ಬುಧಜನರ ಪೊಗಳುತ ಕೃತಿಯನೆಸಗುವೆನು || ೧ || || 16 ||

**ಸೌರಾಷ್ಟ್ರ - ತ್ರಿವುಡೆ**
ಧರೆಯೊಳತ್ಯುತ್ತಮವೆನಿಪ ವರ |
ಪರಶುರಾಮನ ಸೃಷ್ಟಿಯೊಳು ಮೆರೆ |
ದಿರುವ ಪೆರಡೂರ್ ಪದ್ಮನಾಭನ | ಕರುಣದಿಂದ || ೧ ||

ಇರುವೆ ರಘುರಾಮಾಭಿಧಾನದಿ |
ವಿರಚಿಸುವ ಕವಿತಾಚಮತ್ಕೃತಿ |
ಯರಿಯದವ ನಾನೊರೆವೆ ಶ್ರೀಹರಿ | ಕರುಣದಿಂದ || ೨ ||

ಬಾಲಭಾಷಿತವೆಂದು ಮನದೊಳು |
ಪೋಲಿಗೈಯ್ಯದೆ ಸುಜನರುಗಳಿದ |
ನಾಲಿಸುತ ಪಾಲಿಸಲಿ ತಪ್ಪನು | ಲೀಲೆಯಿಂದ || ೩ || || 19 ||

**ವಚನ**
ಇಂತೀ ರಸಿಕ ಜನರ್ಗೊಂದನೆಯಂ ಗೈದು ಮುಂದಣ ಕಥಾಪ್ರಸಂಗಮಂ ಪೇಳ್ವೆನದೆಂತೆನೇ-

**ಸೌರಾಷ್ಟ್ರ - ತ್ರಿವುಡೆ**
ಕ್ಷಿತಿಪ ಜನಮೇಜಯನು ಭಕುತಿಯೊ |
ಳತಿಹಿತದಿ ಜೈಮಿನಿ ಮುನಿಯ ಪದ ||
ಸ್ತುತಿಸಿ ಪೇಳಿದನಶ್ವಮೇಧದ | ಕಥೆಯೊಳೊಲಿದು || ೧ ||

ಪೊಡವಿಯೊಳು ಕೌರವರು ಪಾಂಡವ |
ರೊಡನೆ ಯುದ್ಧದಿ ಮಡಿದ ಮೇಲ್ಕಥೆ ||
ನುಡಿದು ಯನ್ನೊಳು ತೋರ್ದೆ ನಿಶ್ಚಯ | ಕಡು ಮಮತೆಯ || ೨ ||

ಆದರಿನ್ನೊಂದಿಹುದು ಪಾರ್ಥಗೆ |
ಮೋದದೊಳು ನಾರದ ಮಹಾಮುನಿ ||
ವೇದ್ಯವರಿಸಿದ ಕಥೆಯ ಪೇಳೆನ | ಗಾದರಿಸುತ || ೩ ||

ಚಂದ್ರಹಾಸನ ಪಿತನು ರಣದೊಳ |
ಗಿಂದ್ರಲೋಕಕ್ಕೈದನೆಂತದು ||
ಚಂದ್ರಮುಖಿ ಶಶಿಪ್ರಭೆಯ ಪರಿಣಯ | ದಂದವೆನಗೇ || ೪ ||

ವಿಸ್ತರಿಸಬೇಕೆಂದು ಕೇಳುತ |
ಹಸ್ತಿನಾಪುರ ಕ್ಷಿತಿಪತಿಯು ತಾ ||
ಹಸ್ತ ಜೋಡಿಸಿ ಪದಕೆ ಚಾಚಿದ | ಮಸ್ತಕವನು || ೫ ||

ಎತ್ತಿ ಕರುಣದಿ ನುಡಿದ ಶ್ರೀ ಪುರು |
ಷೋತ್ತಮನ ಭಕ್ತರ ಸುಚರಿತವ ||
ಬಿತ್ತರಿಸುವೆನು ಕೇಳು ಹರಿಪದ | ಸ್ತುತ್ಯನಾಗಿ || ೬ || || 25 ||

**ದ್ವಿಪದಿ**
ಪದ್ಮಾಖ್ಯಪುರದರಸು ಪದ್ಮಶೇಖರನು |
ಪದ್ಮಿನಿಯು ಎಂಬ ಸತಿಯೊಡನೀರ್ದನವನು || ೧ ||

ಹರುಷದೊಳು ಸತ್ಕೀರ್ತಿಯೆಂಬ ಸಚಿವನನು |
ಬೆರೆದು ರಾಜ್ಯವನು ಪಾಲಿಸುತೀರ್ದನವನು || ೨ ||

ಈರ್ವರುದಿಸಿದರು ಮಕ್ಕಳು ಜವಳಿಯಾಗಿ |
ಉರ್ವಿಯೊಳು ರವಿಬಿಂಬದಂತೆ ಪ್ರಭೆಯಸಗಿ || ೩ ||

ಹಿರಿಯನಿಗೆ ಮಾರ್ತಾಂಡತೇಜನೆನ್ನುವರು |
ಕಿರಿಯನಿಗೆ ಕಮಲಧ್ವಜನೆಂದು ಕರೆಯುವರು || ೪ ||

ಬಾಲಲೀಲೆಗಳಿಂದ ಮೆರೆದು ಬಾಲಕರು |
ಲೀಲೆಯೊಳು ಸಕಲವಿದ್ಯೆಗಳ ಪಠಿಸಿದರು || ೫ ||

ಹರಿಯ ನಾಮಸ್ಮರಣೆ ಬಿಡದೊಂದು ಗಳಿಗೆ |
ಇರುತಿರಲು ಷೋಡಶಾಬ್ದವು ತುಂಬಿತವರ್ಗೆ || ೬ ||

ಇಂತೆಸೆದು ಬಾಲರಿರೆ ಸಚಿವನೊಳು ನೃಪನು |
ಸಂತಸದಿ ಒಡ್ಡೋಲಗದಿ ಪೇಳ್ದನಿದನು || ೭ || || 32 ||

**ಶಂಕರಾಭರಣ - ಅಷ್ಟ**
ಕೇಳಯ್ಯಾ ಮಂತ್ರಿ ಕೇಳಯ್ಯಾ || ಪ ||
ಕೇಳಯ್ಯ ಮಂತ್ರಿ ನಾ ಪೇಳುವ ಪರಿಯ |
ತಾಳದೀರ್ಮನದೊಳೇನೆನುತಲಾಶ್ಚರ್ಯ ||
ಬಾಲಕಗಾದುದು ಷೋಡಶ ಪ್ರಾಯ |
ಲೀಲೆಯೊಳೆಸಗುವೆನೈ ಶುಭಕಾರ್ಯ || ಕೇಳಯ್ಯಾ || ೧ ||

ಪಟ್ಟದರಸಿ ಪದ್ಮಿನಿಯ ಜಠರದಲಿ |
ಪುಟ್ಟಲಿಲ್ಲವು ಬಾಲರೆನುತ ಚಿಂತೆಯಲಿ ||
ಸೃಷ್ಟಿಪಾಲಕನ ಸ್ಮರಣೆಯ ಭಕ್ತಿಯಲಿ |
ನಿಟ್ಟುಸುರಿಟ್ಟು ಬೇಡಲು ದಯಶಾಲಿ || ಕೇಳಯ್ಯಾ || ೨ ||

ತರಳರನೀರ್ವರ ಕೊಟ್ಟ ನಮ್ಮವನು |
ಕರುಣದಿ ಪರಿಪಾಲಿಸಿದ ರಮಾಧವನು ||
ವರುಷ ಷೋಡಶ ಪ್ರಾಯ ಬಂತವರ್ಗಿನ್ನು |
ವಿರಚಿಪೆ ಪರಿಣಯದುತ್ಸವವನ್ನು || ಕೇಳಯ್ಯಾ ಮಂತ್ರಿ || ೩ ||

ಛಪ್ಪನ್ನ ದೇಶದ ದೊರೆಗಳ ಬಳಿಗೆ |
ತಪ್ಪದೆ ನೀನೀಗ ಪೋಗುತಾಮ್ಯಾಗೆ ||
ಒಪ್ಪಿಗೆಯಪ್ಪ ಕನ್ನಿಕೆಯರ ನೋಡಿ |
ಬಪ್ಪುದು ಲಗ್ನವಿರಿಸುತೊಡಗೂಡಿ || ಕೇಳಯ್ಯಾ ಮಂತ್ರಿ || ೪ || || 36 ||

**ಸುರುಟಿ - ಆದಿ (ಕೇಳಮರಾಧಿಪನೇ ಎಂಬಂತೆ)**
ದೊರೆಯರಗ್ಗಳ ಕೇಳು | ನಿನ್ನೊಳು |
ಒರೆಯುವ ಮಾತುಗಳು ||
ಧರೆಯೊಳಗಿರುತಿಹ | ಧರಣೀಶರ ಸುತೆ |
ಯರ ಬರೆಸಿದ ಪಠ | ವಿರುವುದೆನ್ನೊಳು ದಿಟ || ೧ ||

ತರಳರ ಕರೆಸುತ್ತಾ | ಪಠವ ನೀ |
ನಿರದೆ ತೋರಿಸು ಮತ್ತಾ ||
ಸರಸದೊಳವರ್ಮನ | ವರಿಸಿದವರನು ನಾ |
ನರಿತು ಬರುವೆ ಲಗ್ನ | ವಿರಿಸುತ ಹರುಷದಿ || ೨ || || 38 ||

**ಭಾಮಿನಿ**
ಎನುವ ಸಚಿವನ ನುಡಿಯ ಲಾಲಿಸಿ |
ಜನಪನಾಗಿಹ ಪದ್ಮಶೇಖರ |
ಮನದಿ ನಿಶ್ಚೈಸಿದನು ತನ್ನಯ ತನಯರನು ಕರೆಸೀ ||
ವಿನಯದೊಳಗಿದನರುಹಿ ಸನುಮತ |
ವನುಗೊಳಿಸಬೇಕೆನುತಲಾಕ್ಷಣ |
ಘನ ಸಭಾಸ್ಥಳಕವರ ಕರೆಸುತ್ತನುನಯದೊಳೆಂದಾ || ೧ || || 39 ||

**ಕಾಂಭೋದಿ - ಅಷ್ಟ**
ಬಾಲಕರಿರ ಕೇಳಿರೀಗಾ | ಮನ |
ದಾಲೋಚನೆಯ ಪೇಳ್ವೆ ಬೇಗಾ ||
ಜಾಲವಲ್ಲಿದು ನಿಜ | ಕಾಲ ಕಳೆಯದೆ ಭೂ |
ಪಾಲ ಕುವರಿಯರನ್ನು ಪುಡುಕಿಸಿ |
ಲೀಲೆಯೊಳು ಪರಿಣಯವ ಗೈಸುವೇ || ೧ ||

ಮಾಡಿಸುತಲೀ ಲಗ್ನ ನಿಮಗೇ | ಸುಖ |
ನೋಡಬೇಕಂಬರ್ತಿಯೆಮಗೇ ||
ರೂಢಿಯೊಳಿದು ಹಿತ | ರೂಢಿಯಾಗಿರ್ಪುದಾ |
ಮಾಡದಿರೆ ಮೇಲಿನ್ನು ನಮ್ಮನು |
ರೂಢಿಪಾಲರು ನೋಡಿ ನಗುವರು || ೨ ||

ಮೃಗಧರಧರನ ಘರ್ಜನೆಯೂ | ಮತ್ತೆ |
ಗಗನವೇ ಹರಿದು ಬಿದ್ದಡೆಯು ||
ಬಗೆಯದೆ ಮನದೊಳೊ | ಮ್ಮೆಗೆಯಿರಬಹುದಯ್ಯ |
ಜಗದೊಳಗಿನಪವಾದವೆಂಬುದು |
ಸುಗುಣರಿಗೆ ಬಲು ದೊಡ್ಡ ಮಾತಿದು || ೩ || || 42 ||

**ಭಾಮಿನಿ**
ಎಂದು ನಾನಾಪರಿಯ ಬೋಧೆಗ |
ಳಿಂದ ಭೂವರ ನುಡಿದ ಮಾತುಗ |
ಳಂದವನು ಕೇಳುತ್ತ ಮನದೊಳಗಂದು ಕಳವಳಿಸಿ ||
ಸುಂದರರು ಬಂದೆರಗಿ ಪಿತನೊಳು |
ನಿಂದು ಮಾರುತ್ತರವ ಪೇಳ್ವರೆ |
ಕಂದಿ ಕುಂದುತ ಭಯದಿ ನುಡಿದರು ಭಾವಭಕುತಿಯಲಿ || ೧ || || 43 ||

**ಕೇದಾರಗೌಳ - ಝಂಪೆ**
ಚಿತ್ತವಿಸು ಪ್ರಿಯ ತಾತನೆ | ನಿನ್ನೊಡನೆ |
ಬಿತ್ತರಿಪೆವೀ ಮಾತನೆ ||
ಮತ್ತಕಾಶಿನಿಯರುಗಳು | ಧರೆಯೊಳಗೆ |
ಅತ್ಯಂತ ಘಾತಕಿಗಳು || ೧ ||

ಸುತರೆ ನಿಮ್ಮಯ ಮಾತನು | ಕೇಳ್ದರತಿ |
ವ್ಯಥೆಯು ಬಾಧಿಪುದೆನ್ನನು ||
ಕ್ಷಿತಿಯ ಸತಿವ್ರಾತವೆಲ್ಲ | ದುರ್ನೀತಿ |
ಯುತರೆಂಬುದುಚಿತವಲ್ಲ || ೨ ||

ಬಪ್ಪ ಕೇಳೀ ಜಗದೊಳು | ನೂರರಲಿ |
ತಪ್ಪಿ ಸುಗುಣದೊಳೋರ್ವಳು ||
ವಪ್ಪುತಿಹಳದನರಿಯದೆ | ಸ್ತ್ರೀಯರೊಳು |
ತಪ್ಪಿಲ್ಲವೆನ್ನಬಹುದೆ || ೩ ||

ಸ್ತ್ರೀಯರಿಂದಲೆ ಸರ್ವವು | ಜಗದೊಳಗೆ |
ಸ್ತ್ರೀಯರಿಂದಲೆ ಸ್ವರ್ಗವು ||
ಸ್ತ್ರೀಯರೇ ಸಂಸಾರಕೆ | ಮೂಲರಹ |
ಸ್ತ್ರೀಯರಂ ತ್ಯಜಿಪುದೇಕೆ || ೪ ||

ಸಂಸಾರವೆಂಬ ಬಲೆಯೋಳ್ | ಸಿಲುಕಿದರೆ |
ಕಂಸಾರಿಪದ ಧ್ಯಾನದೋಳ್ ||
ಸಂಶಯವ ಪುಟ್ಟಿಸುವುದು | ಅದನರಿತು |
ನಾಂ ಸಹಜ ಬೇಡೆಂಬುದು || ೫ ||

ಸಹಜವಲ್ಲಿಂಥ ಮಾತು | ಮನದೊಳಗೆ |
ಬಹು ಕ್ಲೇಶ ಪುಟ್ಟಿಸುವುದು ||
ಅಹಹ ಸಂಸಾರಧರ್ಮ | ದೊರೆಗಳಿಗೆ |
ವಿಹಿತ ಸತ್ಕೀರ್ತಿ ಮರ್ಮ || ೬ || || 49 ||

**ಮಧುಮಾಧವಿ - ಅಷ್ಟ**
ಬೇಡವೆಮಗೆ ಮದುವೆ | ನೀನೀ ಪರಿ |
ಪೀಡಿಸುವದು ತರವೇ ||
ನೋಡು ಸ್ತ್ರೀಯರು ಬಲು | ಗಾಡಿಗಾತಿಯರೆಂದು |
ರೂಢಿಯೊಳ್ಪೇಳುವರು | ಬಲ್ಲವರು || ೧ ||

ಧರೆಯ ಸ್ತ್ರೀಯರುಗಳೆಲ್ಲ | ಚಪಲೆಯರೆಂ |
ದೊರೆವ ಮಾತುಗಳ್ಸುಳ್ಳಲ್ಲ||
ಬರಿ ಕುಟಿಲೆಯರನ್ನು | ವರಿಸಿಕೊಳ್ಳಲಿಕಿನ್ನು |
ಸರುವಥಾ ಮನವಿಲ್ಲವು | ನಿಶ್ಚಯವು || ೨ || || 51 ||

**ಖಮಾಚ್ - ತ್ರಿವುಡೆ (ತಲೆಯ ಮೆಟ್ಟಿ ತಾಂಡವಾಡಿದಾ ಎಂಬಂತೆ)**
ಸಾಕು ಸಾಕು ಬೇಡ ಛಲಪದ |
ಛಲ್ ಜೋಕೆ ನೋಡಿ || ಸಾಕು || ಪ ||
ಪಿತನ ಮಾತ ಮೀರಿ ನಡೆಯುವ | ಸುತರಿಗ್ಯಾವ |
ಗತಿಯು ದೊರೆವುದೆಂಬ ಸುನೃತವ ||
ಹಿತದಿ ಗ್ರಹಿಸದೆನ್ನ ನುಡಿಗೆ |
ಪ್ರತಿಯನಾಡಲೇಕೆ ಬರಿದೆ |
ಮತಿಯನರಿಯದತುಳ ಮೂರ್ಖ |
ಸುತರೆ ನಿಮಗೆ ಹಿತವನೊರೆವೆ || ಸಾಕು ಸಾಕು || ೧ ||

ಸುತರು ಪುಟ್ಟಲಿಲ್ಲವೆನುತಲಿ | ಹರಿಯ ಪಾದ |
ನುತಿಸಲಾತನೊಲಿದು ಯನ್ನಲಿ ||
ಹಿತದಿ ನಿಮ್ಮ ಕೊಟ್ಟ ಮೇಲೆ |
ಸತತ ತೋಷಬಡುತಲೀರ್ದೆ |
ಗತಿಯು ನೀವೆ ಹಿತರೆನುತ್ತ |
ಮತಿಯೊಳರಿತು ವ್ಯಥೆಯ ತೊರೆದೆ || ಸಾಕು ಸಾಕು || ೨ ||

ಅರಸುತನವು ನಮ್ಮ ವಂಶದಿ | ಹಿರಿಯರಿಂದ |
ಮೆರೆದು ಬಂದ ಬಿರಿದು ವ್ಯರ್ಥದಿ ||
ತೊರೆದು ತರುಣಿಯರನು ವರಿಸ |
ದಿರಲು ಕುಲವನರಿದ ದುರಿತ |
ಹೊರಿಸಿ ತರಣಿತರಳ ನಿಮ್ಮ |
ನರಕದಲ್ಲಿ ನರಳಿಸನೆ ಹಾ || ಸಾಕು ಸಾಕು || ೩ || || 54 ||

**ಸಾಂಗತ್ಯ – ರೂಪಕ**

ಎಂದ ಮಾತಿಗೆ ಮನ | ನೊಂದು ಬಿನ್ನೈಸಿದ |
ರ್ತಂದೆ ಕೇಳ್ವವ ನಿರೂಪದಲಿ ||
ಸಂದೇಹವಿಲ್ಲಾದ | ರೊಂದುಂಟು ನಡತೆಗ |
ಳಿಂದ ನಾವರೆಗೇ ಲೋಕದಲಿ || ೧ ||

ಗುಣಶೀಲ ರೂಪು ಯೌ | ವನ ಕುಲಧರ್ಮಗ |
ಳನು ತಿಳಿಯದೆ ಮೂಢತನದಿ ||
ವನಿತೆಯರೊಳು ಲಗ್ನ | ವನುಚಿತವಾದ ಕಾ |
ರಣ ಪೋಗಿ ಪರಿಕಿಸಿ ಜಗದಿ || ೨ ||

ಪೃಥ್ವಿಪರೊಳು ಬಾಹು | ಸತ್ವದಿ ಕಪ್ಪವ |
ಸತ್ವರದೊಳಗೆ ಸಂಗ್ರಹಿಸಿ ||
ಸಾತ್ವೀಕರೊಡನೆ ಪೂ | ಜ್ಯತ್ವವ ಪಡೆದು ಪ್ರ |
ಭುತ್ವ ಕಾರ್ಯಕೆ ಯೋಗ್ಯರೆನಿಸಿ || ೩ ||

ದುರ್ಮದಾಂಧರ ದುಷ್ಟ | ಕರ್ಮವಾಚರಿಪರ |
ನಿರ್ಮೂಲಗೈದು ಸಂಗರದಿ ||
ನಿರ್ಮಲರಾದ ಸ | ದ್ಧರ್ಮಿಗಳನು ಕ್ಷಾತ್ರ |
ಧರ್ಮದೀ ಪೊರೆದಾನಂತರದಿ || ೪ ||

ಮನಕೇ ವಪ್ಪಿದ ರಾಜ | ತನಯೆಯರನು ನೋಡಿ |
ಘನತೆಯೊಳವರನ್ನೇ ವರಿಸಿ ||
ವಿನಯದಿ ಬಹೆವು ನೀ | ನನುಮಾನಿಸದೆ ವೀಳ್ಯ |
ವನು ಕೊಟ್ಟು ಕಳುಹೆಮ್ಮ ಹರಸಿ || ೫ || || 59 ||

**ನೀಲಾಂಬರಿ - ತ್ರಿವುಡೆ (ಬಾಲನೆಲ್ಲಿಗೆ ಪೋದನೈ | ಯನ್ನಯ ಎಂಬಂತೆ)**

ಬಾಲಕರಿರ ಮನದ | ಆಲೋಚನೆಯ |
ಲೀಲೆಯಲ್ಲಿದು ಜಗದ ||
ಭೂಲಲಾಮರೊಳಿಂಥ | ಕಾಳಗ ಬೆಳೆಸುತ್ತ |
ಸೋಲಿಸಿ ಬಹೆವೆನ್ನುತ್ತ | ಪೇಳುವಿರಿ ವ್ಯರ್ಥ || ೧ ||

ಹರಿಯ ಕರುಣದಿಂದಲಿ | ಭೂಪರ ಗೆದ್ದು |
ಬರುವೆವು ತೋಷದಲಿ ||
ಬರಿದೆ ಚಿಂತಿಸದೆಮ | ಗಿರದೇ ವೀಳ್ಯವನಿತ್ತು |
ಹರುಷದಿ ಕಳುಹುವದು | ನಿಶ್ಚಯವಿದು || ೨ ||

ಅನುಮಾನವೆನಗಿಹುದು | ಪೇಳುವೆ ಯನ್ನ |
ಮನಕೇ ವಪ್ಪಿಗೆಯಾಗದು ||
ತನಯರು ನೀವ್ ರಣ | ದನುವರಿಯದೆ ಮನ |
ವನು ಮಾಳ್ಪಿರೆಂತು ಧೈರ್ಯ | ಆಶ್ಚರ್ಯ || ೩ ||

ಕ್ಷಾತ್ರಧರ್ಮದ ಪದ್ಧತಿ | ಮೀರದೆ ನಾವು |
ಧಾತ್ರಿಯೊಳನುಸರಿಸಿ ||
ಕೀರ್ತಿ ಮೆರೆಸಿ ಮನ | ಕರ್ಥಿಯಾಗಿ ರಾಜ |
ಪುತ್ರಿಯರನು ವರಿಸಿ | ಬರುವೆವು ಬೆರೆಸಿ || ೪ || || 63 ||

**ವಾರ್ಧಕ**
ಎಂದು ನಾನಾವಿಧದಿ ಕಾಡುತಂ ಬೇಡುತಂ |
ನಿಂದು ಪಿತನಡಿಗಳಿಗೆ ಶಿರಬಾಗಿ ಬೆರಗಾಗಿ |
ವಂದನೆಯ ಗೈವ ತನುಜಾತರಂ ಖ್ಯಾತರಂ ನೋಡಿ ಸಂತಸದಿಂದಲಿ ||
ಮಂದಹಾಸದಿ ನುಡಿದ ವೀರರೋಳ್ಧೀರರೋಳ್ |
ಕುಂದಿಕೊಳ್ಳದೆ ನೃಪರ ನೆಲೆಯರಿದು ಗೆಲವರಿತು |
ಸಂಧಿಯನ್ನೆಸಗಿ ಸ್ತ್ರೀಯರ ಕೂಡಿ ಮೆರೆದಾಡಿ ಬಹುಬೇಗ ಬನ್ನಿರೆಂದು || ೧ || || 64 ||

**ಭಾಮಿನಿ**
ವೀಳಯವ ಪೊಂಬಟ್ಟಲಿನೊಳಾ |
ವೇಳ್ಯಕೊದಗಿಸಿ ಕೊಡಲು ಬೇಗದಿ |
ವ್ಯಾಳಶಯನನ ಧ್ಯಾನಿಸುತಲದ ಕೊಂಡು ಹರುಷದೊಳು ||
ಕೇಳುತಿದ ಮಾತೆಯೊಳಗಪ್ಪಣೆ |
ಕೇಳಿ ಬಹೆವೆಂಬರ್ಥಿಯಿಂದಲೆ |
ಮೇಳವಿಸುತೈತಂದು ಪದಕೆರಗಿದರು ಪದ್ಮಿನಿಯ || ೧ || || 65 ||

**ಕಂದ ಪದ್ಯ**
ಎರಗಿದ ಸುತರಂ ಕಾಣುತ |
ಹರುಷದಿ ಬಿಗಿಯಪ್ಪುತಲಾ ತರಳರೊಳೆಂದಳ್ ||
ಧರಿಸುತ ಶರಗಳ ಕರದೋಳ್ |
ಪೊರಟಿಹ ಪರಿಯೇನೆನೆ ಪೇಳ್ವರಿಂತೆನುತಂ || ೧ || || 66 ||

**ಕಾಂಬೋಧಿ - ಅಷ್ಟ (ಮಂತ್ರಿಗಳಿರ ಕೇಳಿರೀಗ ಎಂಬಂತೆ)**
ಲಾಲಿಸಬೇಕಮ್ಮ ಮಾತೆ | ಮನ |
ಕಾಲಸ್ಯವಿಡದೆ ವಿಖ್ಯಾತೆ ||
ಭೂಲಲಾಮರ ಗೆಲ್ಲು |
ವಾಲೋಚನೆಯ ಗೈದು |
ಮೇಳವಿಸಿ ನಾವೀಗ ನಿಮ್ಮನು |
ಕೇಳಬಂದೆವು ಪಾಲಿಸಪ್ಪಣೆ || ೧ ||

ಅಕಟ ಪೇಳುವೆ ನಾನೇನಿದಕೆ | ದೊರೆ |
ನಿಕರವ ಗೆಲ್ವೆವೆಂಬುದಕೆ ||
ಸುಕುಮಾರಕರೆ ಯುದ್ಧ |
ಯುಕುತಿ ಸಾಲದು ಬದ್ಧ |
ಮುಕುತಿದಾತನ ಪಾದಸ್ಮರಣೆಯ |
ಸುಖದೊಳಿರುವದು ಯುಕುತ ಮನೆಯೊಳು || ೨ ||

ತರಳರೆಂದೆನುತ ನೀವೆಮ್ಮ | ನೋಡಿ |
ಕೊರತೆಗೊಳ್ಳುವುದ್ಯಾತಕಮ್ಮ ||
ಸ್ಮರನು ಬಾಲ್ಯದಿ ಧನು | ಶರವಾಂತು ಪೂರ್ವದಿ |
ಧುರದೊಳಗೆ ಖಳ ಶಂಬರನ ಸಂ |
ಹರಿಸಿ ಕೀರ್ತಿಯ ಮೆರೆಸಲಿಲ್ಲವೆ || ೩ ||

ಮಾತ ಕೇಳ್ವವರು ನೀವಲ್ಲ | ಅತಿ |
ಪ್ರೀತಿಯೋಳ್ವೇಳ್ವೆನೀ ಸೊಲ್ಲ ||
ಭೂತಳದೊಳು ಧುರ | ಖ್ಯಾತರಾಗಿಹ ನರ |
ನಾಥರನು ತಾವ್ ಗೆಲ್ವೆವೆಂಬೀ |
ಹೇತು ಸಲ್ಲದು ಮಾತು ನಿಜವಿದು || ೪ ||

ಧರೆಯರಸರ ಮಾತಂತಿರಲಿ | ಮತ್ತೆ |
ಹರಿಹರರೊಂದಾಗಿ ಬರಲಿ ||
ಧುರದೊಳವರ ಮನ | ಹರುಷಿಸದಿರೆ ನಮ್ಮ |
ಪರಮ ಪಾವನೆ ಮಾತೆ ನಿನ್ನಯ |
ವರ ಕುಮಾರಕರಲ್ಲ ನಿಶ್ಚಯ || ೫ || || 71 ||

**ನೀಲಾಂಬರಿ - ರೂಪಕ (ಎಲ್ಲಿಗೆ ಪೋಗುವೆ ಭಾಗ್ಯಸಂಪನ್ನನೆ ಎಂಬಂತೆ)**

ಅಕಟಕಟೇಂಗಯ್ಯಲಿ ಯೀ |
ಸುಕುಮಾರಕರಾಡುವ ನುಡಿ |
ಯುಕುತವೆ ದೊರೆಗಳ ಗೆಲ್ಲುವ |
ಶಕುತಿಯು ಇವರ್ಗಿಹುದೇ || ಅಕಟಕಟ || ಪ ||
ಮಕ್ಕಳು ಪುಟ್ಟದೆ ಬಹುದಿನ |
ದುಃಖದೊಳಿರುತೀರ್ದೆನು ನಾ |
ರಕ್ಕಸವೈರಿಯ ಕರುಣದಿ | ಸಿಕ್ಕಿದಮೇಲಿವರು ||
ಅಕ್ಕರದಿಂದಿರುತೀರ್ದೆನು |
ಮಕ್ಕಳ ಲೀಲೆಯ ನೋಡುತ |
ಫಕ್ಕನೆ ಹೀಗೆಂಬರು ಹಾ |
ದಿಕ್ಕಿನ್ಯಾರೆನಗೆ || ಅಕಟಕಟ || ೧ ||

ನುಡಿದರೆ ಮಾತನೆ ಕೇಳರು |
ಹಿಡಿದ ಛಲವ ಬಿಡಲೊಲ್ಲರು |
ತಡೆಯಲಿ ಹ್ಯಾಗಿವರನು ನಾ |
ನೊಡಬಡಿಸುತಲಿನ್ನು ||
ಹಡೆದಿಹ ಕಷ್ಟವನೆಣಿಸಲು |
ವಡಲುರಿ ಶಿರಕಡರುವುದೈ |
ಜಡಜಾಂಬಕಗರ್ತಿಯೆ ಯೀ |
ಹುಡುಗರು ಹೊರಡುವುದು || ಅಕಟಕಟೇಂ || ೨ || || 73 ||

**ಭಾಮಿನಿ**

ಎಂದು ನಾನಾವಿಧದಿ ದುಃಖಿಸು |
ತಂದು ಮರುಗುವ ಮಾತೆಯಳ ಪದ |
ದ್ವಂದ್ವಕಾನತರಾಗಿ ನುಡಿದರು ಮಧುರವಚನದಲಿ ||
ತಂದೆಯೊಡನಪ್ಪಣೆಯಗೊಳುತಾ |
ವಿಂದು ಪೊರಟೆವು ರಣಕೆ ಪೋಗದೆ |
ಹಿಂದೆ ಹೆಜ್ಜೆಯನಿಡಲು ಬರುವದು ದುರಿತ ಎಂಬಳಸಿ || ೧ || || 74 ||

**ಮಾರವಿ - ಏಕ (ಆಗ ಸುಧನ್ವನು ಬೇಗದಿ ಎಂಬಂತೆ)**

ಆದುದರಿಂದ ನೀ | ಖೇದವ ಗೊಳ್ಳದೆ |
ಮೋದದೊಳೆಮ್ಮವನು ||
ಆಧರಿಸುತ್ತಲೆ | ಸಾದರದಾಶೀ |
ರ್ವಾದವ ಕೊಡುತಿನ್ನು || ೧ ||

ಅಳುಕದೆ ಮನದೊಳು | ಕಳುಹಿಸಿದರೆ ಕೈ |
ಚಳಕವ ತೋರಿಸುತ ||
ಇಳೆಯೊಳು ರಾಜರ | ಗೆಲಿದೈತಪ್ಪೆವು |
ಸೆಳೆದು ಕಪ್ಪವ ಸಹಿತ ||೨ ||

ತರಳೆಯರಾಗಿಹ | ದೊರೆಕುವರಿಯರನು |
ಪರಿಕಿಸುತಲೆ ನಾವು ||
ಹರುಷದಿ ಪರಿಣಯ | ವಿರಚಿಸುತವರನು |
ಬೆರಸುತಲೈತಹೆವು || ೩ ||

ಕೊಡಿಸೆಮಗಪ್ಪಣೆ | ತಡೆಯಬೇಡೆನುತವ |
ಳಡಿಗೆರಗುತಲಾಗ ||
ವಡಬಡಿಸುತಲಾ | ಹುಡುಗರು ಪೊರಟರು |
ಪೊಡವಿಯೊಳತಿಬೇಗ || ೪ || || 78 ||

**ತುಜಾವಂತು - ಮಟ್ಟೆ (ಆರೆಲೋ ಕಿರಾತವರ್ಯನೇ ಎಂಬಂತೆ)**
ಪೊರಟರಾಗ ಸಮರಧೀರರೂ || ಪ ||
ಕರದಿ ಧರಿಸುತಸ್ತ್ರಶಸ್ತ್ರ |
ಪರಮ ಭಾಗವತರು ಮತ್ತಾ |
ಧುರದಿ ಧರೆಯ ಗೆಲ್ವೆವೆನುತ |
ಭರಿತ ರೋಷಪರರಾಗುತ ||
ಹರಿಯ ಪಾದವನ್ನೆ ಸ್ಮರಿಸುತ | ಭಕ್ತಿಯೊಳು ಮನದಿ |
ಗುರುವಿನಂಘ್ರಿಗೆರಗಿ ನುತಿಸುತ | ನಿಜ ಮಾತೆಪಿತರ |
ಪರಕೆಗೊಂಡು ಸುರರ ಸ್ತುತಿಸುತ || ೧ ||

ವಿಮಲ ಮಾರ್ತಾಂಡತೇಜ |
ಕಮಲಧ್ವಜನ ಕೂಡಿ ರಾಜ |
ಕಮಲವನ್ನೆ ಪುಡುಕಿ ಪೋಪ |
ಭ್ರಮರದಂತೆ ನೆಗೆದಾಡುತ್ತ ||
ಸಮಯವರಿತಾಕ್ರಮಣ ಗಯ್ಯುತ | ಸಿಕ್ಕೀರ್ದ ನೃಪರ |
ಸಮರದೊಳಗೆ ಭಂಗಬಡಿಸುತ | ಮತ್ತಿರದೆ ಸುಗುಣ |
ಕುಮುದಮುಖಿಯರನ್ನೆ ಪುಡುಕುತ || ೨ ||

ಅಂಗವಂಗದವರ ಸಮ ರ |
ಣಾಂಗಣದೊಳು ಸೋಲಿಸುತ್ತ |
ಕಂಗೊಳಿಸುತಲಿರುತಿರುವ ಕ |
ಳಿಂಗರನ್ನು ಬಡಿದಪ್ಪಳಿಸಿ ||
ಮುಂಗಡೆಯೊಳು ಭಟರ ಜಯಿಸುತ | ಮನದೊಳಂತ |
ರಂಗದೊಳಗೆ ಸತಿಯರ್ಪುಡುಕುತ | ಕಾಣಿಸದೆ ತೋಷ |
ಹಿಂಗಿ ಮುಂದೆ ಮುಂದೆ ಸರಿವುತ || ೩ || || 81 ||

**ಭಾಮಿನಿ**
ಇನಿತು ನಾನಾದೇಶ ಕಳೆದಾ |
ತನಯರುಗಳೊಂದಿನದಿ ಮನದೊಳು |
ಚಿನುಮಯನ ಧ್ಯಾನಿಸುತ ವನದೊಳು ವಿಶ್ರಮಿಸಿಕೊಂಡು ||
ವಿನಯದಿಂದಿರುತಿರಲು ಪೇಳಿದ |
ಘನತರದ ವಾಕ್ಯದೊಳಗಣ್ಣನೊ |
ಳನುವರಿತು ವಿಸ್ತರಿಸಿ ತನ್ನಯ ಮನದ ಕಾಂಕ್ಷೆಯನೂ || ೧ || || 82 ||

**ಸುರುಟಿ - ಏಕ (ದೇವ ದೇವರ ದೇವಾ | ಭಕತಸಂ ಎಂಬಂತೆ)**
ಅಣ್ಣನೆ ಲಾಲಿಪುದು | ಯನ್ನಯ |
ಸಣ್ಣಮಾತಿದೊಂದು ||
ಪನ್ನಗವೇಣಿ ಸಂ | ಪನ್ನ ಗುಣಾಢ್ಯೆಯ |
ರನ್ನು ಪುಡುಕಿದೆವು | ಇನ್ನೂ ದೊರೆಯರೈ || ೧ ||

ಬಹುದೇಶವ ಕಳೆದು | ಬಂದೆವು |
ಬವರದೊಳಗೆ ಮೆರೆದು ||
ಅಹ ನಮ್ಮಯ ಮನ | ಕಹ ತರಳೆಯರಿ |
ನ್ನಿಹರೆಲ್ಲಿಯೊ ನಾವ್ | ಸಹಜದಿ ಪುಡುಕಲು || ೨ ||

ಬೇರೆಬೇರೆಯಾಗಿ | ಪೋದರೆ |
ನಾರಿಯರನು ಪುಡುಕಿ ||
ಧೀರೆಯರನು ನಾವ್ | ಸೇರುತ ಬೇಗದಿ |
ಕಾರಣ ತೀರಿಸೆ | ಮೂರ ಪೋಗುವೆವೈ || ೩ || || 85 ||

**ಕೇದಾರಗೌಳ - ಝಂಪೆ**
ತಮ್ಮ ನೀನೆಂಬ ಮಾತು | ಮನಸಿನೊಳ |
ಗೊಮ್ಮೆ ವಪ್ಪಿಗೆಯಪ್ಪುದು ||
ಸಮ್ಮತವೆ ನಿನ್ನ ತ್ಯಜಿಸು | ತೀರ್ಪುದಕೆ |
ವಮ್ಮದೈ ಯನ್ನ ಮನಸು || ೧ ||

ಅಹಹ ನಿನ್ನಯ ಮಾತಿದು | ಗ್ರಹಿಸಿದರೆ |
ಬಹು ತೋಷ ಮನಕಪ್ಪುದು ||
ಸಹಜ ವಿಧಿಕೃತವನ್ಯಾರು | ಮೀರುವವ |
ರಿಹರೆ ಭುವನದೊಳು ತೋರು || ೨ ||

ಬೇಡ ಬೇಡೆನ್ನ ಬಿಟ್ಟು | ಪೋಗುವರೆ |
ಮಾಡದಿರು ಘನದಿ ಗುಟ್ಟು ||
ನೋಡಿ ಸಂತಸ ನಿನ್ನನು | ಪಿತನಡಿಗೆ |
ಕೂಡಿ ಪೊಡಮಡುವೆ ನಾನು || ೩ ||

ಬೇಗ ಪಿತನಡಿಗಳನ್ನು | ನೋಳ್ಪುದಕೆ |
ಯೋಗ್ಯವೀ ರೀತಿಯಿನ್ನು ||
ಹ್ಯಾಗಾದರತಿ ಜವದೊಳು | ನೋಡುವೆವು |
ಭಾಗ್ಯಮಾತೆಯ ಪದಗಳು || ೪ || || 89 ||

**ದ್ವಿಪದಿ**
ಮಾತೆಯಂ ಬೇಗ ನೋಳ್ಪಾತುರದಿ ಒಪ್ಪಿ |
ಖ್ಯಾತ ನುಡಿದನು ತಮ್ಮನನ್ನು ಬಿಗಿದಪ್ಪಿ || ೧ ||

ಹರಿಯ ನಾಮವ ಬಿಡದೆ ಹರಿಸು ಮನದೊಳಗೆ |
ಪರಮಾತ್ಮ ಸಲಹುವನು ಕರುಣದೊಳು ನಮಗೆ || ೨ ||

ಎನಲು ಕಮಲಧ್ವಜನು ಸಂತಸದಿ ನಮಿಸಿ |
ವಿನಯಪರನಾಗಿ ಪೂರ್ವಾಭಿಮುಖ ಗಮಿಸಿ || ೩ ||

ಪೋಗುತಿರೆ ಕಂಡು ಶಿರಬಾಗಿ ಹರಿಪದಕೆ |
ಬೇಗದೊಳು ಮಾರ್ತಾಂಡತೇಜ ಪಶ್ಚಿಮಕೆ || ೪ ||

ಪೊರಟು ಬರೆ ಬರುತ ಕಂಡನು ಘೋರ ವನದಿ |
ಪರಿಕಿಸುತಲಾಶ್ಚರ್ಯಪರನಾದ ಮನದಿ || ೫ || || 94 ||

**ಮೋಹನ - ಅಷ್ಟ**

ಜಾತಿವೈರವು ಮನದೊಳಗೆ | ಘನ |
ಭೀತಿಯನಿಡದೇ ಈ ವನದೊಳಗೆ ||
ಪ್ರೀತಿಯೊಳು ಮೃಗ | ಪೋತಗಳು ಮನ |
ಭೀತಿಯಿಲ್ಲದೆ | ವೋತು ಕುಣಿವವು || ೧ ||

ಶಿಂಗ ಗಜವು ಚಂಗಾಡುವವು | ಸಾ |
ರಂಗದೊಡನೆ ಪುಲಿಯೋಡುವವು ||
ಮುಂಗುಲಿಯೊಡನಹಿ | ಯಂಗವ ನೀಡುತ |
ಭಂಗರಹಿತ ಸುಖ | ಸಂಗರ ಗೈವವು || ೨ ||

ತೊರೆಯುತ ಋತುಭೇದಗಳನು | ಅಹ |
ಮೆರೆದಿರುವವು ತರುಲತೆಗಳಿನ್ನು ||
ಪರಿಪರಿ ಪುಷ್ಪಗ | ಳರಳಿ ಮೆರೆಯುವವು |
ಥರಥರದಿಂ ಫಲ | ಭರಿತ ವೃಕ್ಷಗಳಿವು || ೩ || || 97 ||

**ಭಾಮಿನಿ**

ಇಂತು ಮೃಗಗಳ ವೈರವಿಲ್ಲದ |
ಶಾಂತ ವನವನೆ ಕಂಡು ಮನಕ |
ತ್ಯಂತ ಹರುಷವನಾಂತು ನುಡಿದನು ದಿವ್ಯ ಕ್ಷೇತ್ರಮಿದು ||
ಯೆಂತು ಬಣ್ಣಿಪೆನಿದರ ಮಹಿಮೆಯ |
ಕಂತುಪಿತಪದಧ್ಯಾನದಿಂದಿಹ |
ಸಂತರಿರಬೇಕಿಲ್ಲಿ ನಿಶ್ಚಯವೆನುತ ಪುಡುಕಿದನು || ೧ || || 98 ||

**ಕಂದ**

ಪುಡುಕುತ ಪೋಗಲ್ಕೊಂದಾ |
ವೆಡೆಯೋಳ್ಕಂಡನು ಮಾಂಡವ್ಯ ಮುನಿಯಾಶ್ರಮವಂ ||
ಕಡು ಭಯ ಭಕ್ತಿಯನಾಂತುರೆ |
ಪೊಡವಿಗೆ ಮಯ್ಯಿಕ್ಕಿ ನುತಿಸಿ ಮುಂದಕೆ ತೆರಳಲ್ || ೧ || || 99 ||

**ಶಂಕರಾಭರಣ - ಅಷ್ಟ (ನೋಡಿರೋ ಅಷ್ಟನಾರಾಯಣನನ್ನುಎಂಬಂತೆ)**

ಕಂಡನೂ ಧ್ಯಾನಪರನಾದ ಮುನಿಯನ್ನು ಕಂಡನೂ || ಪ ||
ಕಂಡನೂ ಮುನಿಯಂಘ್ರಿಗಳನು | ನೆಲೆ |
ಗೊಂಡು ತಪವ ಮಾಳ್ಪನನ್ನು || ಆಹಾ ||
ದಂಡಕಾಷ್ಟವನೊಡ | ಗೊಂಡು ಕರದಿ ಯಜ್ಞ |
ಕುಂಡದ ಬಳಿಯೊಳು | ಮಂಡಿಸಿದವನನ್ನು || ಕಂಡನೂ || ಅ. ಪ. ||
ಕೊರಳೊಳೊಪ್ಪುವ ರುದ್ರಾಕ್ಷಿಗಳು |
ಬೆರಳೋಳ್ಪವಿತ್ರ ದರ್ಭೆಗಳು | ಭಸ್ಮ |
ಧರಿಸಿದಾನಂದ ಚಂದಗಳು | ಮನ |
ದಿರವು ಶ್ರೀಹರಿಯ ಪಾದಗಳು || ಬಿಡ |
ದುರುತರ ತಪದೊಳು | ಮೆರೆದು ಬಂಧನ ಭವ |
ತೊರದ ಮಹಾಮೌನಿ | ವರನ ಪಾದಗಳನ್ನು|| ಕಂಡನೂ || ೧ ||

ಶಿರದೊಳು ಜಟೆಯನ್ನು ಧರಿಸಿ | ಮತ್ತೆ |
ಕರದೊಳು ಜಪಸರವೆಣಿಸಿ | ಪರ |
ತರ ಸಾಧನೆಯೊಳ್ಮನವಿರಿಸಿ | ಬಾಯೊ |
ಳಿರದೆ ಸೋಹಂಮೆಂದುಚ್ಚರಿಸಿ || ಆಹಾ ||
ಸರಳ ಭಕ್ತಿಯೊಳು ಕ | ಣ್ದೆರೆಯದೆ ಕುಳಿತಿಹ |
ಪರಮ ಪಾವನದಾ | ವರ ಮಹಾಋಷಿಯನ್ನು || ೨ || || 101 ||

**ಕೇದಾರಗೌಳ - ಝಂಪೆ**
ನೋಡಿ ಮುನಿಯಂಘ್ರಿಗಾಗ | ಶಿರಬಾಗಿ |
ಮಾಡಿದನು ನಮನ ಬೇಗ ||
ಪಾಡಿ ಪೊಗಳುತ್ತ ಮನದಿ | ನುತಿಸಿ ಕೊಂ |
ಡಾಡಿದನು ಭಕ್ತಿ ಭಯದಿ || ೧ ||

ಧ್ಯಾನ ಉತ್ಥಾನವಾಗೆ | ನೃಪವರನ |
ಸೂನುವನು ನೋಡಿ ಹೀಗೆ ||
ನಾನಾ ಪ್ರಕಾರದಿಂದ | ಮುನಿ ಕೇಳ್ದ |
ಯೇನು ನೀನಿಲ್ಲಿ ಬಂದ || ೨ ||

ಕಾರಣವ ಪೇಳೆನ್ನೊಳು | ಮತ್ತೆ ನೀ |
ನ್ಯಾರೆಂಬುದರುಹೀಗಳು ||
ಘೋರ ವನದೊಳು ತಿರುಗುವ | ಪರಿಯನು ವಿ |
ಚಾರಿಸುವೆ ಪೇಳು ನಿಜವ || ೩ || || 104||

**ಭಾಮಿನಿ**
ಮುನಿಯ ವಚನವ ಕೇಳಿ ಮನದೊಳು |
ಘನತರದ ಸಂತೋಷ ತಾಳುತ |
ವಿನಯದಿಂದಲೆ ಪೇಳಿದನು ತನ್ನನುವ ಮುನಿಯೊಡನೆ ||
ಜನಪನಾಗಿಹ ಪದ್ಮಶೇಖರ |
ನೆನಿಪ ನೃಪತಿಯ ಕುವರನೆನ್ನನು |
ಎನುವರೈ ಮಾರ್ತಾಂಡತೇಜನು ಎನಲು ಮುನಿ ನುಡಿದ || ೧ || || 105||

**ಕೇದಾರಗೌಳ - ಅಷ್ಟ**
ಬಾಲ ಕೇಳು ನಿನ್ನ | ಪಾಲ ಭೂಪಾಲನು |
ಲೀಲೆಯೊಳೆನ್ನ ಶಿಷ್ಯ ||
ಆಲಸ್ಯದಿಂದ ನೀ | ಪೊರಟ ಕಾರಣವೇನು |
ಪೇಳು ಎನ್ನೊಳಗವಶ್ಯ || ೧ ||

ಅನುಜನ ಕೂಡಿ ನಾ | ವಿನಯದಿ ಪೊರಟೆನು |
ಘನ ದಿಗ್ವಿಜಯಕೆನುತ ||
ಮನವು ಬೇರಿರಿಸುತ್ತ | ತನು ಪೂರ್ವ ಗಮಿಸೆ ನಾ |
ನಿನಗೆ ಕಂಡೆನು ವಿಹಿತ || ೨ ||

ಕೇಳಿ ಮನದಿ ಮುನಿ | ತಾಳಿ ಸಂತೋಷವ |
ಪೇಳಿದನವನೊಳಗೆ ||
ಆಲಿಸುತಲಿ ಪರ್ಣ | ಶಾಲೆಯೊಳಿರು ಮಂತ್ರ |
ಪೇಳುವೆ ಜಪ ನಿನಗೆ || ೩ ||

ದ್ವಾದಶಾಕ್ಷರಿ ಮಂತ್ರ | ವೇದ ಶರದ ತಂತ್ರ |
ಮೋದದೊಳಗೆ ನೀನು ||
ಬೋಧಿಸುತ್ತಿರದೆ ನೀ | ಸಾಧಿಸಿ ಕೊಟ್ಟು ವಿ |
ನೋದವಗೊಳಿಸೆನ್ನನು || ೪ || || 109||

**ವಾರ್ಧಕ**

ಎನುವ ಮಾತನೆ ಕೇಳಿ ವಿನಯದೊಳಗಾ ಮುನಿಯು |
ಘನತರದ ಸರ್ವ ಜಯವೆನಿಪ ಧನು ಶರಮಿತ್ತು |
ತನಯನೊಳಗದ ಬಿಡುವ ತೊಡುವಂದಮಂ ಕಲಿಸಿ ನುಡಿದನಿನಿತೆಲ್ಲವನ್ನು ||
ಮನಸಿನೊಳು ದೃಢವಾಂತು ದ್ವಾದಶಾಕ್ಷರಿ ಮಂತ್ರ |
ವನುದಿನದಿ ಜಪಿಸುವಂತುಪದೇಶಮಂ ಗೈವೆ |
ನೆನುತವನ ಪೋಗಬಿಡದಲ್ಲಿ ನಿಲ್ಲಿಸಲಿತ್ತ ಅತ್ತಲಾ ಕಮಲಧ್ವಜನು || ೧ || || 110 ||

**ಸೌರಾಷ್ಟ್ರ - ತ್ರಿವುಡೆ**

ನಡೆನಡೆದು ಮನಗುಂದಿ ತನ್ನೊಳು |
ನುಡಿದ ತಾನೇಕಕಟ ಪಿರಿಯನ |
ನುಡಿಯ ಕೇಳದೆ ಬಂದೆನೋರ್ವನೆ | ದೃಢ ಮನದೊಳು || ೧ ||

ಅಡಿಗಡಿಗೆ ಬಾಧಿಪುದು ಹಶುತೃಷೆ |
ಬಿಡದಿದರ ಸಹಿಸುತ್ತ ಮುಂದಕೆ |
ನಡೆಯಲಾರೆನು ಕಾಡಿನೊಳು ದೃಢ | ವಿಡಿದು ಮನಕೆ || ೨ ||

ತೋರುತಿಹ ತರುಪೊದೆಗಳಡ್ಡದಿ |
ಸೇರಿ ವಿಶ್ರಮ ಸುಖದೊಳಾಯಸ |
ತೀರಿಸುತ ಚೇತರಿಸಿ ಮುಂದಕೆ | ಸಾರುತಿರುವೆ || ೩ ||

ಯೆನುತ ವಿಶ್ರಮಿಸುತ್ತಲಿರಲಾ |
ವನದೊಳಗೆ ಕೈರಾತ ವೀರರು |
ಮನವೊಲಿದು ಕೂಡುತ್ತ ಬೇಟೆಗೆ | ವಿನಯದಿಂದ || ೪ || || 114||

**ಭೈರವಿ - ತ್ರಿವುಡೆ**

ಬಂದರಾಗ | ವನಕೈ | ತಂದರಾಗ || ಪ ||
ಬಂದರಾಗಲೆ ಬೇಟೆ ಬೇಡರ |
ಸಂದಣಿಯನೊಡಗೊಳ್ಳುತ ||
ಹಂದಿ ಕಾಡ್ಮೃಗ ಬಂದು ಸೇರಿಹ |
ಸಂದುಗೊಂದನೆ ನೋಡುತ ||
ಮಂದಿಗಳ ನೋಡುತ್ತ ಬಲ್ ಜೋ |
ಕೆಂದು ಘರ್ಜನೆ ಮಾಡುತ ||
ಮುಂದುವರಿವ ಮ | ದಾಂಧತೆಯ ಸುಖ |
ದಿಂದ ಕೂಡುತ | ಸಿಂಧು ಘೋಷದಿ || ೧ ||

ಬರಬರುತಲ್ಲಲ್ಲಿ ತೋರುವ |
ಭರಿತ ವನಗಳ ಸೇರುತ ||
ಕರೆಕರೆದು ನಾಯ್ಗಳನು ಬಿಟ್ಟರು |
ಕೊರಳ ಸರಪಣಿ ಬಿಚ್ಚುತ ||
ಪರಿಪರಿಯ ಘರ್ಜನೆಯ ತೂರುವ |
ಶರಭಸಂಕುಲಕಿರಿವುತ ||
ಮೆರೆವ ಕಾಡ್ಕುರಿ | ಕೋಣಮೆನ್ನದೆ |
ತರಿದು ಶರಗಳ | ಬಿರುಸಿನಿಂದಲಿ || ಬಂದರಾಗಾ || ೨ || || 116 ||

**ಕೇದಾರಗೌಳ - ಝಂಪೆ**
ಆಡುತ್ತ ಬೇಟೆಯನ್ನು | ಬರಬರುತ |
ನೋಡಿದರು ಹರಿಣವನ್ನು ||
ಕೂಡಿ ಸಂತೋಷದಿಂದ | ಗುರಿಯಿಟ್ಟು |
ಪೂಡಿದರು ಸರಳನೊಂದ || ೧ ||

ಸರಳು ತಾಗಲು ಉರಿಯೊಳು | ತರಹರಿಸು |
ತಿರದೋಡುತತಿ ಭರದೊಳು ||
ಮೆರೆವ ವನ ಸುತ್ತಿ ಸುತ್ತಿ | ಬರುತೀರ್ದು |
ದುರಿಯು ಜಠರದಲಿ ಪತ್ತಿ || ೨ ||

ಬರುವ ಭರ ಕಮಲಧ್ವಜನು | ನಿದ್ದೆಯಿಂ |
ದಿರದೆದ್ದು ಕುಳಿತೀರ್ದನು ||
ಸರಸದೊಳಗೋಡಿ ಬರುವಾ | ಮೃಗವ ಕಂ |
ಡಿರದೆ ಪೂಡಿದನು ಶರವ || ೩ ||

ಶರಹತಿಗೆ ಮೃಗ ಬೀಳಲು | ಕಂಡು ಮನ |
ಹರುಷದಿಂದಿರಲಿತ್ತಲು ||
ಅರಸುತ್ತ ಬೇಟೆಯವರು | ನೋಡಿ ಮೃಗ |
ಹೊರುವದಕ್ಕನುವಾದರು || ೪ ||

ಎಲವೊ ನೀವ್ಯಾರು ಬಂದು | ಮೃಗವನೆ |
ನ್ನೊಳು ಕೇಳದೊಯ್ವಿರಿಂದು ||
ಛಲವೊ ಬಲುಮೆಯೊ ನಿಮ್ಮದು | ಬಿಟ್ಟು ಪೋ |
ಗಲು ನಿಮಗೆ ಹಿತಮಪ್ಪುದು || ೫ ||

ನೋಡು ನಾವ್ ಬೇಡರಹೆವು | ಮೃಗ ಬೇಟೆ |
ಯಾಡಿ ವನದೊಳು ಸೋತೆವವು ||
ಓಡಿ ಬಿದ್ದೈತೆ ಮೃಗವು | ನಮ್ಮದಿದು |
ಕೂಡಿ ಕೊಂಡೊಯ್ವೆವ್ ನಿಜವು || ೬ || || 122 ||

**ಶಂಕರಾಭರಣ - ಏಕ**
ಮುಚ್ಚಿ ಬಾಯಿ ನಮ್ಮದೆಂಬ |
ಹುಚ್ಚು ಮಾತ ಪೇಳ್ದರಿನ್ನು |
ಕೊಚ್ಚಿ ಕೊಲ್ವೆ ನಿಮ್ಮನಿದುವೆ | ನಿಶ್ಚಯಮಿದು || ೧ ||

ಬಿಡಾಕ್ರೃ ಸುಮ್ಕೇ ಯಿಂತಾ ಮಾತಾ |
ನಾಡ್ಬೇಡಾ ನಮ್ಮೊಳು ವೆರ್ಥಾ |
ಗಡ್ಬಡಾ ಗೈದರೆ ನಿನ್ನ | ಬಡ್ದಪ್ಪಳಿಪೆವು || ೨ ||

ನುಡಿಯ ಕೇಳಿ ಕಮಲಧ್ವಜನು |
ಕಿಡಿಯನುಗುಳುತಸ್ತ್ರದಿಂದ |
ಹೊಡೆದೂ ಬಡಿದೂ ಸರ್ವರನ್ನು | ಕೆಡಹಲ್ಕಾಗಲು || ೩ ||

ವೀರ ದೀರ್ಘಾಕ್ಷನೆಂದೆಂಬ |
ಧೀರ ಕೈರಾತಾಧಿಪತಿಯು |
ತೋರಿಬಂದು ನಿಂತ ಧನು | ರ್ಧಾರಿಯಾಗುತ್ತ || ೪ || || 126 ||

**ಲಾವಣಿ – ಏಕತಾಳ**
ಯಾರ್ಮಾ್ಯ ಪುಟ್ಟ ಹುಡುಗನೈದಿ |
ತೋರ್ಮಾ್ಯ ನಮ್ಮ ಹರಿಣ ಜವದಿ |
ಸಾರ್ಮಾ್ಯ ವ್ಯರ್ಥಾ ಕೆಡ್ಸೈದಿ ನೀನು |
ಬಲ್ ಜೋಕೆಯಿನ್ನು || ಸಾರ್ಮಾ್ಯ || ೧ ||

ಹರಿಣದಾಶೆ ಬಿಟ್ಟು ಎನ್ನ |
ಶರಣು ಹೊಕ್ಕರೆ ನಾ ನಿನ್ನ |
ಕರುಣದಿಂದ ರಕ್ಷಿಸುವೆನು | ಸರಳ್ಬಿಡದೆ ಯಿನ್ನು ||
ಕರುಣದಿಂದಾ ರಕ್ಷಿಸುವೆನು || ೨ ||

ಜಳೂಳಸಳ್ಯಾಕೊಸದು ನಮ್ಮ |
ಪಳು ಬಲವಾ ಗೆದ್ದೆನೆಂಬ |
ಟೊಳ್ಳು ಶೌರ್ಯಾ ಶೆರಕೇರ್ರೈತೆಯ | ಯಲವೋ ಮಳ್ಳಯ್ಯ ||
ಟೊಳ್ಳು ಶೌರ್ಯಾ ಶೆರಕೇರ್ರೈತೆಯ || ೩ ||

ಮರುಳರ್ಯಾರೆನುತ್ತಲೀಗ |
ಸರಳಿನಿಂದ ತೋರ್ಪೆ ಬೇಗ |
ಪರಿಹಾರವಿದ್ದರೆ ಮಾಡಿಕೊ | ಹರಿಯ ಬೇಡಿಕೋ |
ಪರಿಹಾರರವಿದ್ದರೆ ಮಾಡಿಕೊ || ೪ || || 130 ||

**ಭಾಮಿನಿ**
ಎನುತ ಶರ ಬಿಡಲಾಕ್ಷಣದೊಳದ |
ಕನುವರಿತು ಬೇರೊಂದು ಸರಳಿನ |
ಕೊನೆಯೊಳದ ಕತ್ತರಿಸಿ ಘನತರರದಸ್ತ್ರ ಸಂಕುಲದಿ ||
ಸೆಣಸಿ ಹೊಯ್ದಾಡುತ್ತಲಿಬ್ಬರು |
ರಣದಿ ಸರಿಸರಿಯಾಗಿ ಕಾದಲು |
ಮನದಿ ರೋಷವನಾಂತು ಕಮಲಧ್ವಜನು ಬೊಬ್ಬಿರಿದು || ೧ || || 131 ||

**ವಾರ್ಧಕ**
ಘೋರತರಮಾದ ಮಂತ್ರಾಸ್ತ್ರಮಂ ಬಿಡಲಾಗ |
ಧಾರುಣಿಗೆ ಮಯ್ಯಿಕ್ಕಿ ಮೂರ್ಛೆಯೋಳ್ಕೈರಾತ |
ವೀರ ಚೇತರಿಸಿಕೊಂಡೆದ್ದು ನುಡಿದನು ರಣದಿ ಶೂರನಾಗಿಹೆ ಮೆಚ್ಚಿದೆ ||
ಸೂರೆಯಾಗೈತೆ ಎನ್ನಯ ಮನಸು ನಿನ್ನ ಮೇಲ್ |
ಚಾರುತರದಸ್ತ್ರಮಂ ಕೊಸೆಯುವೆನು ನೋಡೆನುತ |
ಧೀರ ಶರಸಂಧಾನಮನ್ನೆಸಗಿ ಕರದೊಳಿಹ ಚಾಪ ಮುಕ್ಕಡಿಗೈದನು || ೧ || || 132 ||

**ನೀಲಾಂಬರಿ - ರೂಪಕ**
ಕರದ ಧನುವ ಕತ್ತರಿಸಲು |
ಧರೆಗುರುಳುತ ಕಳವಳದೊಳು |
ಪಿರಿಯನ ಮಾತನು ನಾ ಧಿ |
ಕ್ಕರಿಸಿಹ ಕಾರಣದಿಂದಲಿ |
ಹರಹರ ಬಂದೊದಗಿದುದೀ |
ಧುರದೊಳಗಪಜಯವು || ೧ ||

ಯಾತಕೆ ಯನ್ನಣ್ಣನ ಬಿ |
ಟ್ಟ್ಯಾತಕೆ ಅಡವಿಯೊಳ್ಕಲಗಿದೆ |
ಯಾತಕೆ ಹರಿಣವು ಬಂದುದಿ |
ನ್ಯಾತಕೆ ನಾ ಕೊಂದೆನೋ ಮ |
ತ್ಯಾತಕೆ ಯುದ್ಧದಿ ಬೇಡರ |
ವ್ರಾತವ ಸದೆಬಡಿದೆ || ೨ ||

ಘಾತುಕನಾಗಿಹ ದುಷ್ಟ ಕಿ |
ರಾತನೊಳ್ ಯುದ್ಧದಿ ಸೋಲುವ |
ಮಾತಿದು ಜಗದೊಳಗೆನಗಪ |
ಕೀರ್ತಿಯ ತರದಿಹುದೇ |
ಮಾತಿದು ಜಗದೊಳಗೆನಗಪ |
ಕೀರ್ತಿಯ ತರದಿರದೆನ್ನುತ |
ಕಾತರಿಸುತ ರೋಷದಿ ಕಡು |
ಭೀತಿಯನುಳಿದೆದ್ದ || ೩ || || 135 ||

**ಭೈರವಿ - ಏಕ**
ಕಮಲಧ್ವಜ ಭೋರ್ಗುಡಿಸಿ | ಬರ |
ಲಮಮ ಸಾಹಸಿಯೆಂದೆನಿಸಿ ||
ಸುಮನಸರೆದೆ ಬಿಚ್ಚಿದುದು | ಈ |
ಕಮಲಭವಾಂಡ ಕುಗ್ಗಿದುದು || ೧ ||

ಫಡ ಕೈರಾತ ಕೇಳಿತ್ತ | ಧನು |
ಕಡಿದರೆ ಬಿಡುವೆನೆನುತ್ತ ||
ದೃಢ ಮಾಡದಿರೆಲೊ ಮನದಿ | ನಿನ್ನ |
ಕೆಡಹುವೆ ನಾ ಭುಜಬಲದಿ || ೨ ||

ಎನುತಲೆ ಮುಷ್ಟಿಯೊಳೆರಗೆ | ಕಂ |
ಡನು ಹುಡುಗನ ಸಾಹಸಕೆ ||
ಮನ ಮೆಚ್ಚುತ ಘಾತಿಸದೆ | ಅವ |
ನನು ಪಿಡಿದನು ಕ್ಷಣದೊಳಗೆ || ೩ || || 138 ||

**ಭಾಮಿನಿ**
ಕರುಣದೊಳು ಬಾಲಕನ ಕೊಲ್ಲದೆ |
ಕರಗಳನು ಹಿಂಗಟ್ಟಿ ಕಟ್ಟುತ |
ಪೊರಮಡಲು ಬಳಿಕಿತ್ತಲಾ ಮಾಂಡವ್ಯನಾಶ್ರಮದಿ ||
ಭರದೊಳಗೆ ಮಾರ್ತಾಂಡತೇಜನಿ |
ಗಿರದೆ ಮೋಹದಿ ಜಠರದೊಳು ಘನ |
ಉರಿಯು ಕಳವಳಿಸಲ್ಕೆ ಕೇಳ್ದನು ಪರಮ ಮುನಿಯೊಡನೆ || ೧ || || 139 ||

**ಸಾರಂಗ - ಅಷ್ಟ**
ಲಾಲಿಸು ಮೌನಿಪಾಲ | ಪೇಳುವೆನು ಸು |
ಶೀಲ ಕೃಪಾಬ್ಧಿಲೋಲಾ ||
ಪಾಲಿಪುದೆನ್ನ ನೀ | ನಾಲಸ್ಯಗೊಳ್ಳದೆ |
ಜಾಲವಲ್ಲಿದು ನಿಜ | ಪೇಳ್ವೆನಾಗಮವನ್ನು || ೧ ||

ಮನ ಕಳವಳಿಸುವದು | ನಿಶ್ಚಯ ಮತ್ತೀ |
ತನುವು ಕಂಪಿಸುತಿಹುದು ||
ವಿನಯದೊಳೆನ್ನ ತ | ಮ್ಮನು ಯೇನಾಗಿಹನೆಂದು |
ಘನದಿವ್ಯಜ್ಞಾನದೊ | ಳನುವರಿತುಸುರಿಂದು || ೨ ||

ಎನೆ ಕೇಳ್ದು ಮುನಿವರನು | ಜ್ಞಾನದಿ ನೋಡಿ |
ವಿನಯದೊಳಿಂತೆಂದನು ||
ಘನ ಯುದ್ಧದೊಳಗೆ ನಿ | ನ್ನನುಜನು ಹೋರಾಡಿ |
ಧನುವನ್ನೆ ಕಳಕೊಂಡು | ಕೊನೆಗೆ ಸೋತಿಹನಿಂದು || ೩ || || 142 ||

**ನೀಲಾಂಬರಿ - ಏಕ (ಆ ಮುನಿಯಾಶ್ರಮಕ್ಕಾಗಿ ಪೋಗು ನೀನು ಎಂಬಂತೆ)**
ಕಟ್ಟಿ ರಟ್ಟೆಯನು ಕೊಂಡು ಪೋಪರೀಗ | ನೀನು |
ಘಟ್ಟಿಗನಾದರೆ ಪೋಗಿ ಬಿಡಿಸು ಬೇಗ || ೧ ||

ಕೊಡುವೆನಿದಕೋ ಮಂತ್ರ ಶಕ್ತಿ ಶರಗಳನ್ನು | ಇದ |
ಪಿಡಿದು ಮುಂದಕ್ಕಾಗಿ ಪೋಗು ತಡೆಯದಿನ್ನು || ೨ ||

ಎಂದ ಮಾತ ಕೇಳಿ ರೋಷವೇರುತಾಗ | ಮುನಿಯ |
ದ್ವಂದ್ವ ಪಾದಕ್ಕೆರಗಿ ಪೊರಟನಂದು ಬೇಗ || ೩ || || 145 ||

**ಭಾಮಿನಿ**
ಬರುವ ಭರಕನಿಲನನು ಪಿಂದ |
ಕ್ಕಿರಿಸಿದನೊ ಯೆಂಬಂತೆ ಮನದೊಳು |
ಭರಿತ ರೋಷವನಾಂತು ಕರದೊಳು ಸಾಯಕವ ತಿರುಹಿ ||
ಧಿರುರೆ ಮುಂದಕೆ ಗಮಿಸದಿರಿ ನಾ |
ಧುರಕೊದಗಿ ಬಂದಿಹೆನೆನುತ್ತಲೆ |
ಕರೆಕರೆದು ಬೊಬ್ಬಿರಿದು ತಡೆದನು ಮುಂದೆ ಪೋಗೊಡದೆ || ೧ || || 146 ||

**ಘಂಟಾರವ - ಅಷ್ಟ**
ನಿಲ್ಲಿ ನಿಲ್ಲಿರಿ ಹುಡುಗನ ಕಟ್ಟಿ ಕೊಂ |
ಡೆಲ್ಲಿ ಗೈವಿರಿ ಕಳ್ಳರಂದದಿ |
ಕೊಲ್ಲುವೆನು ನಾನೀಕ್ಷಣ || ೧ ||

ಎಂದ ಮಾತನೆ ಕೇಳಿ ಕೈರಾತರು |
ನಿಂದು ಹಿಂದಕೆ ನೋಡಿ ಬರುತಿಹ |
ಕಂದನಿವನ್ಯಾರನೆಂದರು || ೨ ||

ಯಾರು ಯೇನೆಂಬ ಪರಿಯನೆಲ್ಲವನೀಗ |
ತೋರುವೆನು ಧುರದೊಳಗೆ ನಿಮ್ಮನು |
ಗಾರುಗೆಡಿಸಿದ ಮೇಲಕೆ || ೩ || ||149 ||

**ಮಾರವಿ - ಏಕ**

ಯಾರ್ಮ್ಯಾ ಹುಡುಗ | ಬಾರ್ಮ್ಯಾ ನಮ್ಮೊಳು |
ತೋರ್ಮ್ಯಾ ಕೈಚಳಕವನೀಗ ||
ಪೇರ್ಮೆ ಬೇಡ | ಸಾರ್ಮ್ಯಾ ಹಿಂದಕೆ |
ಕೋರ್ಮ್ಯಾ ನಮ್ಮನುಗ್ರಹವೀಗ || ೧ ||

ಅನುಗ್ರಹಿಸುವೆ ನಾ | ಧನು ಶರದಲಿ ನಿ |
ನ್ನನು ಮೆಚ್ಚಿಸುತೀಗ ||
ಘನತರ ಸಾಹಸ | ವನು ತೋರುತ ನಾ |
ನನುಜನ ಕೊಂಡೊಯ್ವೆನು ಬೇಗ || ೨ ||

ಪರಿಯಾನರಿಯ | ದೊರಲ್ವೇ ಸುಮ್ಮೇ |
ಧುರಧೀರ ಕೈರಾತರ್ಮ್ಯ ||
ಶರಣನಾಗೀ | ಹರಣವುಳುಹೀ |
ತಿರುಗೀ ಹಿಂದಕೆ ಪೋಗುಮ್ಮ || ೩ ||

ಪರಿಯ ಬಲ್ಲೆ | ಕರಡಿ ಸಂಗ |
ಡಿರುವ ಕುಜನರೆಂದು ||
ಶಿರವನರಿವೇ | ಧುರದೋಳೆನುತ |
ಸರಳಾ ಬಿಟ್ಟಾನೊಂದು || ೪ || || 153 ||

**ಭಾಮಿನಿ**

ಧುರದೊಳಗೆ ಸರ್ವರನು ಮೋಹನ |
ಶರದೊಳಗೆ ಕೆಡದುಳುಹಿ ಮುಂದಕೆ |
ಕರದು ತಮ್ಮನ ಕರವ ಬಿಚ್ಚಲು ಹರುಷಪರರಾಗೆ ||
ಕರುಣದೊಳು ರಕ್ಷಿಸಿದನೇ ಶ್ರೀ |
ಹರಿಯು ನಮ್ಮನೆನುತ್ತ ಪೊಗಳುತ |
ಪರಮ ಮೋಹದಿ ಜೊತೆಯನಗಲದೆ ಪೊರಟರಲ್ಲಿಂದ || ೧ || || 154 ||

**ದ್ವಿಪದಿ**

ಬರಬರುತ ನೋಡಿದರು ಸ್ತ್ರೀರಾಜ್ಯವನ್ನು|
ಮೆರೆದು ಕಂಗೊಳಿಸುತಿಹ ಗುಡಿಗೋಪುರವನು || ೧ ||

ತೋರುತಿಹ ಪುರ ಬಾಹ್ಯದೊಳಗೀರ್ಪ ವನದಿ |
ಸೇರಿ ವಿಶ್ರಮಿಸಲ್ಕೆ ಇಚ್ಛಿಸಿದರ್ಮನದಿ || ೨ ||

ಅರಸ ಕೇಳಾ ನಾಡಿನರಸಿ ಶಶಿಪ್ರಭೆಯು |
ಮೆರೆದಿರುವ ಕಾರಣವನರುಹುವೆನು ನಿಜವು || ೩ ||

ಕಾಳಿಯಂ ಭಜಿಸಿ ಪ್ರತ್ಯಕ್ಷಳಾಗುತಲಿ |
ಬಾಲಕಿಗೆ ವರವನಿತ್ತಿಹಳು ಹರುಷದಲಿ || ೪ ||

ವರಹಮಾಲೆಯು ಎಂಬ ಹಾರವಿದರನ್ನು |
ಧರಿಸಿದರೆ ಪ್ರತಿಭಟನ ಸತ್ವ ದ್ವಿಗುಣವನು || ೫ ||

ಹೊಂದಿ ಜಯವಹುದು ಮತ್ತೀ ಹಾರ ಕರದಿ |
ನಿಂದು ಪಿಡಿದಾಲೋಚಿಸಲು ಬರುವ ಭರದಿ || ೬ ||

ಘೋರರೂಪಿಯು ಎಂಬ ದೈತ್ಯ ಕೇಳೆನುತ |
ಹಾರವನು ಕೊಟ್ಟು ತೆರಳಲ್ಕೆ ಹರುಷಿಸುತ || ೭ ||

ವರಹಮಾಲೆಯ ಬಲುಮೆಯಿಂದ ಪುರದೊಳಗೆ |
ಪುರುಷರಿರದಂತೆ ಡಂಗುರ ಹೊಯ್ಸಿ ಮ್ಯಾಗೆ || ೮ ||

ಧುರದೊಳಗೆ ಗೆದ್ದು ಬರಬೇಕು ಶಶಿಪ್ರಭೆಯ |
ಬರಿದೆ ಬಂದರೆ ಹೊಯ್ಯುತಿಹಳವರ ತಲೆಯ || ೯ ||

ಎನುತ ಪಟದೊಳು ಬರೆಸಿ ದ್ವಾರಕಂಟಿಸುತ |
ವಿನಯದೊಳಗಿರುತೀರ್ದಳವಳು ಬಳಿಕಿತ್ತ || ೧೦ ||

ಅದನರಿಯದಿವರು ವನಪೊಗಲು ತಕ್ಷಣದಿ |
ಬೆದರಿಸುತ ವನಪಾಲಕಿಯರ್ತಡದರ್ಜವದಿ || ೧೧ || || 165 ||

**ನೀಲಾಂಬರಿ - ಏಕ**
ನಿಲ್ಲೀ ನಿಲ್ಲೀ ಮುಂದಕ್ಕೇ ನೀ |
ವೆಲ್ಲ ಪೋಪೀರಿಂದು ||
ಫುಲ್ಲಲೋಚನೆಯ ರಣದಿ |
ಗೆಲ್ಲದೆ ನೀವಿಂದು || ೧ ||

ನಿಮ್ಮ ಗೆಲುವೆ ಮಾತಿದೇನು |
ಬೊಮ್ಮನು ಬರಲೊಮ್ಮೆಗೆ ||
ಸುಮ್ಮನಿರದೆ ಗೆಲ್ವೆವು ರಣದಿ |
ಹೆಮ್ಮೆ ನುಡಿಯದೀರ್ಹಿಗೆ || ೨ ||

ಅರಸಿಯಾದ ಶಶಿಪ್ರಭೆಯನು |
ಧುರದಿ ಗೆದ್ದರೆ ನಿಮ್ಮನು ||
ಬರಲು ಬಿಡುವೇವ್ಬರಿದೇ ಬಂದರೆ |
ಶಿರವ ತರಿವೆವು ನಾವಿನ್ನು || ೩ ||

ಅರಸಿಯನ್ನು ಕರೆದು ತನ್ನಿ |
ಬರಿದೆ ಬಗುಳದಿರೆನ್ನುತ ||
ಕರವ ಬಿಗಿದು ಬರದು ಸುಣ್ಣ |
ಭರದೊಳಟ್ಟಿದರ್ಹಿಗ್ಗುತ || ೪ || || 169 ||

**ಕಾಂಭೋದಿ - ಝಂಪೆ**
ಕೇಳು ಭೂಪಾಲ ಸ್ತ್ರೀ | ರಾಜ್ಯಮನ್ನಾಳುತ್ತ |
ಲೋಲೆ ಶಶಿಪ್ರಭೆಯು ಸಂತಸದಿ ||
ಬಾಲಕಿಯರೊಡಗೂಡಿ | ವೋಲಗದೊಳೀರ್ದಳತಿ |
ಲೀಲೆಯೋಳ್ ಶೌರ್ಯ ಸಾಹಸದಿ || ೧ ||

ಭ್ರಮರಕುಂತಳೆಯೆಂಬ | ಪ್ರಮದೆಯಳ ಮಂತ್ರಿತ್ವ |
ಕ್ರಮದಿ ಸಕಲರನೆ ಪಾಲಿಸುತ ||
ಅಮಮ ಸ್ತ್ರೀ ಸೇನೆಯಂ | ಕಮಲಗಂಧಿನಿಯೆಂಬ |
ರಮಣಿವಶಕಿತ್ತು ಪೋಷಿಸುತ || ೨ ||

ಮೆರೆವ ಗಜ ತುರಗ ಮ | ತ್ತಿರದೆ ಪರಿವಾರ ಸಹ |
ಪುರಜನರು ಪೆಣ್ಣಲ್ಲದಿಲ್ಲ ||
ಪುರುಷರೆಂಬವರಿಲ್ಲ | ದಿರುವ ಒಡ್ಡೋಲಗದ |
ಸಿರಿಯು ಝಗಝಗಿಸಿ ತೋರ್ಪಲ್ಲಿ || ೩ || || 172 ||

**ಭಾಮಿನಿ**

ಬಂದು ವನಪಾಲಕಿಯರಾಗಳೆ |
ನಿಂದು ನಮಿಸುತ ನಡನಡುಗಿ ಭಯ |
ದಿಂದ ಬಿನ್ನೈಸಿದರು ವನದೊಳು ಸಂದ ಸಂಗತಿಯ ||
ಇಂದು ಪೇಳಲು ಬೆದರುವೆವು ನಾ |
ವೆಂದು ನುಡಿಯಲು ಶಶಿಪ್ರಭೆಯು ತಾ |
ನಂದು ಅಭಯವನೀಯೆ ಪೇಳ್ದರು ಸಕಲ ಸ್ಥಿತಿಗತಿಯ || ೧ || || 173 ||

**ಶಂಕರಾಭರಣ - ಏಕ**

ಬೇಡಮ್ಮಾ ನಾರೀ | ನಮಗೀ | ಕಾಡು ನೌಕರಿ ||
ಮೂಢ ಪುರುಷರು | ಕಾಡುತಿರುವರು |
ನೋಡಿ ಮದವೇರಿ || ೧ ||

ಅಬ್ಬಬ್ಬಾ ನಮ್ಮ | ಕಟ್ಟುತ | ಲಬ್ಬರಿಸಿದರಮ್ಮ ||
ಇಬ್ಬರ್ಹುಡುಗರ | ಕೊಬ್ಬು ನಮ್ಮಯ |
ಬೊಬ್ಬೆ ನಮ್ಮಮ್ಮ || ೨ ||

ಸುಣ್ಣ ಮೂಗೀಗೆ | ಬರೆದರು | ಬಣ್ಣವಾ ಮ್ಯಾಗೆ ||
ಸಣ್ಣ ಹುಡುಗರ | ಯಣ್ಣದುಪಟಳ |
ಬಣ್ಣಿಸುವದ್ಯಾಗೆ || ೩ ||

ಪೆಟ್ಟಿನುರಿ ಭಾರಿ | ಕಣ್ಣೊಳು | ಪುಟ್ಟುತಿದೆ ವಾರಿ ||
ಕಟ್ಟೀ ಕುಟ್ಟಿ | ಮೆಟ್ಟಿ ನಮ್ಮನು |
ಅಟ್ಟಿದರು ಸಾರಿ || ೪ || || 177 ||

**ಭಾಮಿನಿ**

ಒರೆದರಿಂತೆನುತೆಮ್ಮೊಳಗೆ ನೀ |
ವಿರದೆ ಬೇಗದಿ ಪೋಗಿ ನಿಮ್ಮಯ |
ಶಿರಕೊಡತಿಯಳಿಗರುಹಿ ಕರೆತಹುದೆಂದು ಗರ್ಜಿಸುತ ||
ಭರದೊಳಟ್ಟಲು ಬಂದೆ ನಾವಿ |
ನ್ನಿರುವದೆಂತಕಟಕಟ ವನದೊಳು |
ಪುರುಷರುಪಟಳ ಪೇರ್ಚಿತೆಮಗಪ್ಪಣೆಯನೀಯುವದು || ೧ || || 178 ||

**ವಾರ್ಧಕ**

ವನಪಾಲಕಿಯರೆಂದ ಮಾತ ಕೇಳುತ ಮನದಿ |
ಘನರೋಷವೆತ್ತು ಕಿಡಿಕಿಡಿಯಾಗಿ ಗರ್ಜಿಸಲು |
ವನಧಿಗಳ್ಬಿಕ್ಕಿದವೊ ಗಿರಿಶಿಖರಪರಿದುದೋಯೆನೆ ಪೃಥ್ವಿ ಕಂಪಿಸಿದುದು ||
ಮನದಿ ರೌದ್ರಾವೇಶದಿಂದ ಶಶಿಪ್ರಭೆಯಾಗ |
ತನುಮರದು ಯುದ್ಧ ಸನ್ನಹವೆಸಗ ಪೊರಡೆ ಕಂ |
ಡನುವರಿತು ಭ್ರಮರಕುಂತಳೆಯಾಗಲೈತಂದು ವಿನಯದೊಳಗಿಂತೆಂದಳು || ೧ || || 179 ||

**ಮುಖಾರಿ - ಏಕ**
ಲಾಲಿಸೆನ್ನೊಡತಿ ಶಶಿಪ್ರಭೆಯೆ |
ಸೌಭಾಗ್ಯದ ಸಿರಿಯೆ || ಪ ||
ಧುರಕೆ ಪೊರಡುವೆನೀಗ ನಾನು | ಕರುಣಿಸು ವೀಳ್ಯವನು |
ತರುವೆ ನಾ ಪಿಡಿದು ವೀರರನ್ನು ||
ಉರುತರದಸ್ತ್ರದ | ಬಿರಿಸಿನಿಂದವರನು |
ತರುಬುತ ಗೆದ್ದು ನಾ | ನಿರದೆ ಬರುವನಿಕೊ || ೧ ||

ಈಶನ ಮರೆಯ ಹೊಕ್ಕರಿನ್ನು | ಬಿಡದವರುಗಳನ್ನು |
ನಾಶಮಾಡದೆ ಪಿಡಿದು ನಾನು ||
ತೋಷಗೊಳಿಪೆ ಪರಿ | ಹಾಸಗೈದವರನು |
ಪಾಶದಿ ಬಿಗಿದು ನಿ | ನ್ನಾಶ್ರಯ ಗೊಳಿಸುವೆ || ೨ ||

ಬರಿ ಸಣ್ಣ ಕಾರ್ಯಕ್ಕಾಗಿ ನೀನು | ಪೊರಡುವದಿನ್ನೇನು |
ಹರುಷವಲ್ಲೆಂದು ತಿಳಿದು ನಾನು ||
ಪರಿಪರಿಯೊಳಗಿದ | ನೊರವೆನು ಪರಿಕಿಸಿ |
ಧುರಕೆನಗಪ್ಪಣೆ | ವಿರಚಿಸು ಕರುಣದಿ || ೩ || || 182 ||

**ಭಾಮಿನಿ**
ಎಂದ ಮಾತನೆ ಕೇಳಿ ಶಶಿಪ್ರಭೆ |
ಯಂದು ವೀಳ್ಯವನಿತ್ತು ನುಡಿದಳು |
ಹಿಂದೆ ಕಳುಹುವೆ ಕಮಲಗಂಧಿಯ ಬೆಂಬಲಕೆ ಪೋಗು ||
ಎಂದು ನುಡಿಯಲು ವಂದಿಸುತಲಾ |
ನಂದದೊಳು ಬರಲಿತ್ತಲಿವಳನು |
ಸುಂದರರು ನೋಡಲ್ಕೆ ಪಿರಿಯನೊಳೆಂದ ಕಮಲಧ್ವಜ || ೧ || || 183 ||

**ನೀಲಾಂಬರಿ - ಏಕ (ಯಾವ ರಾಯನಾತ್ಮಜಾತ ವೀರನೀತಾ ಎಂಬಂತೆ)**
ಬರುವಳಿದಕೋ ವೀರ ನಾರಿ | ನೋಡು ನೋಡು | ಕರದಿ |
ಧರಿಸಿ ಇರುವ ಧನುವು ಭಾರಿ | ನೋಡು ನೋಡು || ೧ ||

ವೀರ ಕಾಂತಿಯುಕ್ಕುತಿಹುದು | ಅಣ್ಣ ನೋಡು | ಅಹಹಾ |
ನಾರಿಯರ್ಗಿದೆಂತು ಸಾಧ್ಯ | ಅಣ್ಣ ನೋಡು || ೨ ||

ಸಂಗರಕ್ಕೆನುತ್ತ ಬರುವಳ್ನೋಡು ನೋಡು | ಇವಳ |
ಭಂಗಬಡಿಪೆ ರಣದಿ ಕ್ಷಣಕೆ | ಅಣ್ಣ ನೋಡು || ೩ ||

ಎಂದು ಶರವ ಪಿಡಿದು ಮುಂದೆ | ಪೋಗೆ ಬೇಗ | ಇವಳು |
ಬಂದು ನುಡಿದಳಿಂತೆನುತ್ತ | ಲಿವನೊಳಾಗ || ೪ || || 187 ||

**ಕೇದಾರಗೌಳ - ಅಷ್ಟ ( ಪಾರ್ಥನೆಂಬವನೆ ನೀನು ಎಂಬಂತೆ )**
ಯಾರು ವನವ ಪೊಗಲು | ಪೇಳ್ದರು ನಿಮ್ಮ |
ಚೋರ ಬುದ್ಧಿಯೊಳೀಗಲು ||
ಚಾರು ವನವ ಸೇರಿ | ಸೂರೆ ಗೈದಿಹ ಪರಿ |
ತೋರುವೆನಸ್ತ್ರದೊಳು || ೧ ||

ಸ್ತ್ರೀಯರೊಡನೆ ಯುದ್ಧವು | ಮಾಳ್ಪರೆ ಮನ |
ಹೇಯವಪ್ಪುದು ನಿಜವು ||
ಸಾಯಬೇಡಕಟ ಹಿಂ | ದಕೆ ಪೋಗು ನಿನಗೆ ಉ |
ಪಾಯವ ಹೇಳುವೆನು || ೨ ||

ನಾರಿಯರೊಳು ಯುದ್ಧದಿ | ಗೆದ್ದವನೆ ಬಲ್ |
ಧೀರನಾಗಿಹ ಜಗದಿ ||
ತೋರುವೆನು ಸ್ತ್ರೀಯ | ರಂದವೆನ್ನುತ್ತಾ ಹ |
ಮ್ಮೀರಿ ಶರವನೆಚ್ಚಳು || ೩ ||

ಎಚ್ಚ ಶರೌಘವನ್ನೂ | ನೋಡುತ ನಡು |
ಕೊಚ್ಚಿ ಕೆಡಹುತದನೂ ||
ಉಚ್ಚರಿಸುವ ಮಂತ್ರ | ದಚ್ಚರಿ ಶರವನ್ನು |
ಚುಚ್ಚಿ ಭೋರ್ಗುಡಿಸಿದನೂ || ೪ || || 191 ||

**ಭಾಮಿನಿ**

ಇಂತು ಸರಿ ಸರಿ ಯುದ್ಧದೊಳಗಾ |
ಕಾಂತೆ ಶರವನು ಬಿಡಲು ತಕ್ಷಣ |
ಪಿಂತಿರುಗಿ ಕಮಲಧ್ವಜನು ಧರೆಗುರುಳಿ ಬಸವಳಿಯೆ ||
ನಿಂತು ನೋಡುತ್ತಿರಲು ತಾಳ್ದ |
ತ್ಯಂತ ವ್ಯಥೆ ಮಾರ್ತಾಂಡತೇಜನು |
ಸಂತವಿಸದ್ಯೆತಂದು ಕಳವಳಿಸುತ್ತ ದುಃಖಿಸಿದ || ೧ || || 192 ||

**ನೀಲಾಂಬರಿ - ಆದಿ (ನಾರಿಯ ಕೈಗಳ ನೋಡು | ತೋರುತಿದೆ ಎಂಬಂತೆ)**

ಹಾ ತಮ್ಮ ಮಾತಾಡು |
ಪ್ರೀತಿಯೊಳೆನ್ನನೆ ನೋಡು ||
ಯಾತಕೆ ಈ ಪರಿ ಮೌನ |
ಘಾತಿಸಿದರ್ಯಾರ್ನಿನ್ನ || ೧ ||

ಮನಸಿನ ಕ್ರೋಧಗಳೇನು |
ಮುನಿಸಿನಿತ್ಯಾರೊಳಗಿನ್ನು ||
ನಿನಗೇ ಯುದ್ಧಕೆ ಕಳುಹಿ |
ದೆನು ನಾನೇ ಬಲ್ ದ್ರೋಹಿ || ೨ ||

ದುರುಳೆಯ ಬಾಣವು ನಿನ್ನ |
ಉರದೊಳು ಪೊಕ್ಕುದೆ ಚಿಣ್ಣ ||
ಮರುಗಿದರೇನಹುದಕಟಾ |
ಪೊರೆಯುವ ಶ್ರೀಹರಿಯು ದಿಟ || ೩ || || 195 ||

**ಕಂದ**

ಎಂದೀ ಪರಿ ದುಃಖದೊಳಂ |
ನೊಂದಿಹ ಮಾರ್ತಾಂಡತೇಜನ ನೋಡುತಲಂ ||
ಸುಂದರನೋಳ್ಮನ ಸೋಲುತೆ |
ಎಂದಳು ಮನದೋಳ್ಪ್ರಮರಕುಂತಲೆ ಇಂತೆನುತಂ || ೧ || || 196 ||

**ಯಮುನಾಕಲ್ಯಾಣಿ – ಅಷ್ಟ ( ಸ್ವಾರಿಗೆಲ್ಲಿಗಿದು ದೂರ ಎಲೆ ರಾಧೆ ಎಂಬಂತೆ)**
ಅರರೆ ಯಾರಿವನು ಸುಂದರ ಪುರುಷ | ಈತ |
ಸ್ಮರನಂತೆ ತೋರ್ಪ ಮನಕೆ ಹರುಷ || ಅರರೆ || ಪ ||
ಆಹಾ ಮೊಗದಿ ನಗೆ ಸೂಸುವದು | ಇವನ |
ದೇಹ ಸುವರ್ಣಕಾಂತಿಯ ಮೀರ್ವುದು ||
ಮೋಹವು ಇವನೊಳ್ಪುಟ್ಟುತಲಿಹುದು | ಎನ್ನ |
ಸಾಹಸ ನಡೆಸಿದರೇನಹುದು || ಅರರೆ || ೧ ||

ಸುದತಿಯರಿವನ ನೋಡಿದ ಮ್ಯಾಗೆ | ಮನ |
ಹದದೊಳಗಿರಿಸಿಕೊಂಬುವಹ್ಯಾಗೆ ||
ಹೃದಯವು ಮದದೊಳುಕ್ಕುವದೆನಗೆ |
ಇಂಥ ಚದುರನೊಳೊದಗುವ ಬಗೆ ಹೇಗೆ || ಅರರೆ || ೨ ||

ಮಾತನಾಡಿಸುತ ನೋಡುವೆನೆಂದು | ಅತಿ |
ಪ್ರೀತಿಯೊಳವನ ಹತ್ತಿರ ಬಂದು ||
ಆತುರದಿಂದ ವಂದನೆಗೈದು | ನಿಲ್ಲೆ |
ಮಾತಾಡದಿರೆ ಪೇಳ್ದಳಿಂತೆಂದು || ಅರರೆ ಯಾರಿವನು || ೩ || || 199 ||

**ಶಂಕರಾಭರಣ - ಅಷ್ಟ ( ಮಾತನಾಡೇ ಮದಗಜಯಾನೆ ಎಂಬಂತೆ )**
ಮಾತನಾಡೋ ಮತಿವಂತ ಪ್ರೀತ |
ಯಾತಗೆ ಮೌನವಾಗಿರುವೆ ಪ್ರಖ್ಯಾತ | ದುಗುಡ ವಿಪರೀತ |
ಲಾಲಿಸಿ ಕೇಳು ಮಾತ || ಮಾತನಾಡೋ || ಪ ||
ತಿಳಿಯದೆ ಯಸಗಿದ ತಪ್ಪನ್ನೆ ಕ್ಷಮಿಸಿ |
ಬಳಲಿಸದೆನ್ನ ರಕ್ಷಿಸೊ ಮನ ಸಲಿಸಿ ||
ಕಾಮನ ಬಾಧೆ ಸಹಿಸಿ || ಇರುವದೆಂತೊ ಸಹಸಿ || ೧ ||

ಸೋತು ಬಂದವಳ ಮನ್ನಿಸದ್ಯಾತಕಿಂತಾ |
ನೀತಿಯ ವಚನ ಮೀರುವೆ ಗುಣವಂತ ||
ಯಾರೊಳು ಪೇಳು ಪಂಥ || ವಂದಿಪೆ ನಿನ್ನ ಶಾಂತ || ೨ ||

ಎನುವ ಮಾತುಗಳ ಮಾರ್ತಾಂಡತೇಜನು ತಾ |
ಮನದಿ ನಿಶ್ಚೈಸಲಾರದೆ ಪೇಳ್ದ ಮಾತ |
ಹ್ಯಾಗಿಹುದೋ ಎಂದೆನುತ | ನೋಡುವೆನು ನಾನಿನಿತ || ೩ || || 202 ||

**ಕೇದಾರಗೌಳ - ಝಂಪೆ ( ನಳಿನಾಕ್ಷಿ ಕೇಳೆ ಈಗಾ | ನರನೊಡನೆ ಎಂಬಂತೆ )**
ಕಾಂತೆ ನೀ ಯಾರೆಂಬುದ | ಪೇಳೆನಗೆ |
ಸಂತೋಷವಾದ ಮಾತ ||
ಇಂತು ರಣಕೊದಗೀರ್ದುದು | ನೆವವೊ ನಿಜ |
ವೆಂತೆನುತ ಪೇಳು ತಿಳಿದು || ೧ ||

ಸನ್ನದ್ಧ ರಣಕೆನ್ನುತ | ಬಂದಿರುವೆ |
ಎನ್ನ ಮಾತಿದುವೆ ಸತ್ಯ ||
ನಿನ್ನ ರೂಪನ್ನೆ ಕಂಡು | ಭ್ರಮಿಸಿದೆನು |
ಮನ್ನಿಸೈ ಎನ್ನನಿಂದು || ೨ ||

ಎನುವ ಸಮಯದಿ ಮೂರ್ಛೆಯ | ತಿಳಿದೆದ್ದು |
ಧನುವಗೊಂಡನು ನಿಶ್ಚಯ ||
ಮನದೊಳಗೆ ರೌದ್ರವನ್ನು | ಧರಿಸಿ ರಣ |
ಕೆನುತೆದ್ದ ಕಮಲಧ್ವಜನು || ೩ ||

ಭ್ರಮರಕುಂತಳೆ ನೋಡುತ | ಮನಸಿನೊಳು |
ಭ್ರಮೆಗೊಂಡು ಬೆದರಲಿತ್ತ ||
ವಿಮಲಗುಣ ಮಾರ್ತಾಂಡನು | ತಮ್ಮನೊಳ |
ಗಮಿತ ಪ್ರೀತಿಯೊಳೆಂದನು || ೪ || || 206 ||

**ಭಾಮಿನಿ**
ಸರಳ ತೊಡಬೇಡಕಟ ನಮ್ಮನು |
ಶರಣೆನುತ ಮರೆಹೊಕ್ಕ ನಾರಿಯ |
ಧುರದೊಳಗೆ ಕೊಲ್ಲುವದು ದೊರೆಗಳಿಗ್ಯಾವ ನೀತಿಯಿದು ||
ಹರುಷವಲ್ಲೆಂದವನ ತಡೆಯುತ |
ಲಿರುವ ಸಮಯದೊಳಿತ್ತ ಶಶಿಪ್ರಭೆ |
ಧುರಕೆ ಕಳುಹಿದ ಕಮಲಗಂಧಿಯು ನೋಡುತೀಪರಿಯ || ೧ || || 207 ||

**ಕಾಂಭೋಜ - ಏಕ (ಯಾಕೊ ನಿನಗೀ ಭ್ರಷ್ಟ ಮಾತು ಎಂಬಂತೆ)**
ಏನಿದೇನಿದಕಟ ಸ್ತ್ರೀಯರ |
ಮಾನ ಕಳೆದಳಿಂತು ||
ಮಾನಿನಿ ಭ್ರಮರಕುಂತಳೆ |
ಹೀನ ಮೋಹವಾಂತು || ೧ ||

ಮಮತೆಯಿಂದ ಪೋರರೊಡನೆ |
ರಮಿಸಲಿಚ್ಛೆ ಗೈದು ||
ರಮಣರಾಗಿ ಎಂದು ಭ್ರಮಿಸಿ |
ನಮಿಸುತಿರುವಳಿಂದು || ೨ ||

ಪೋಗಿ ಬೇಗ ಶಶಿಪ್ರಭೆಯೊಳ |
ಗೀಗ ಪೇಳ್ವೆ ನಾನು ||
ನಾಗವೇಣಿ ಮನಕೆ ಬಂದ |
ಹಾಗೆ ಮಾಡಲಿನ್ನು || ೩||

ಎಂದು ಬೇಗ ಬಂದು ನಮಿಸಿ |
ನಿಂದು ನುಡಿದಳಂದು ||
ಮಂದಗಮನೆ ಶಶಿಪ್ರಭೆಯೊಳ |
ಗೆಂದಳು ಇಂತೆಂದು || ೪ || || 211 ||

**ಬೇಗಡೆ - ಆದಿ ( ಕೇಳು ಪ್ರಭಾವತಿ | ಆಲಿಸಿ ನೀ ಲಾಲಿಸಿ ಎಂಬಂತೆ )**
ಕೇಳು ಶಶಿಪ್ರಭೆ | ಪೇಳ್ವುದ ನಾ ಹೇಳ್ವುದ || ಪ ||
ಬಾಲೆ ಗುಣ | ಪಾಲೆ ಸುಖ |
ಲೋಲೆ ಪೇಳ್ವೆ | ಲೀಲೆಯೊಳು || ಕೇಳು || ಅ. ಪ. ||
ಪೋಗಿ ರಣಕೆ ನಿಂತ | ನಾಗವೇಣಿಯು ಮತ್ತ ||
ಭೋಗ ಮನ | ಸ್ಸಾಗಿ ಇಹ |
ಳೀಗ ನಿಜ | ವಾಗಿ ಪೇಳ್ವೆ || ಕೇಳು ಶಶಿಪ್ರಭೆ || ೧ || || 212 ||

**ಭಾಮಿನಿ**
ಭ್ರಮರಕುಂತಳೆ ಹುಡುಗರೊಡನ |
ಕ್ರಮದಿ ಕೂಡಿರುತಿರುವಳೆಂಬುದ |
ಕಮಲಗಂಧಿಯು ಪೇಳೆ ಕೇಳುತ ಶಶಿಪ್ರಭೆಯು ಮನದಿ ||
ಅಮಮ ಮಂತ್ರಿಣಿಗೀಪರಿಯ ಮನ |
ಭ್ರಮಣೆಯಾದುದೆ ಎನುತ ರೌದ್ರದಿ |
ಕಮಲಮುಖಿ ಘರ್ಜಿಸಲು ತಳಮಳವಾಯ್ತು ಭುವನಚಯ || ೧ || || 213 ||

**ಸೌರಾಷ್ಟ್ರ - ತ್ರಿವುಡೆ**
ಎನಲು ಮನಗುಂದುತಲಿ ಪೇಳ್ದಳು |
ವಿನಯರೊಡಗೂಡಿರುವ ಸತಿಯಳ |
ದನುಜನೊಶಕಿತ್ರೀಗ ಕಳೆವೆನು | ಘನವನೆನುತ || ೧ ||

ಮನದೊಳಗೆ ನಿಶ್ಚೈಸಿ ತಕ್ಷಣ |
ಘನ ವರಹ ಮಾಲೆಯನು ಧರಿಸುತ |
ನೆನೆಯೆ ಬಂದನು ಘೋರರೂಪಿ ಎಂ | ದೆನುವ ದನುಜ || ೨ ||

ಈತ ಗೊಂಡಾರಣ್ಯಕಧಿಪತಿ |
ಖ್ಯಾತನೆನಿಸುತ ಶಾರದೆಯ ಪದ |
ಪ್ರೀತಿಯೊಳು ಸೇವಿಸಿದ ಕಾರಣ | ಪೂತನಾದ || ೩ ||

ಬಂದು ಶಶಿಪ್ರಭೆಯೊಡನೆ ಕೇಳ್ದಾ|
ನಂದದೊಳು ನೀ ನೆನೆದ ಕಾರಣ |
ವಿಂದು ಪೇಳುವದೆನಗೆ ಭರದೊಳ | ಗೆಂದು ನುಡಿದ || ೪ ||

ಕೇಳು ದೈತ್ಯನೆ ನೆನೆದ ಕಾರಣ |
ಪೇಳುವೆನು ಸತ್ವರದಿ ನಿನ್ನೊಳು |
ಖೂಳತನವನು ಗೈದ ಸತಿಯಳ | ಕೀಳು ಕೆಲಸ || ೫ ||

ಭ್ರಮರಕುಂತಳೆ ಎಂಬ ಮಂತ್ರಿಣಿ |
ಭ್ರಮಿಸಿ ಪುರುಷರ ಸೇರಿ ವನದೊಳು |
ರಮಿಸುತಿರುವಳ ಪಿಡಿದು ನೀನಾ | ಕ್ರಮಿಸಿ ತಹುದು || ೬ ||

ಆದ ಕಾರಣ ನೆನೆದೆನೆನುತ ವಿ |
ರೋಧವನು ಸೂಚಿಸುತ ದೈತ್ಯನ |
ನಾದರಿಸುತಪ್ಪಣೆಯನಿತ್ತಳು | ಮೋದದಿಂದ || ೭ || || 220 ||

**ಘಂಟಾರವ - ಏಕ**
ಭರದಿಂದಪ್ಪಣೆ ಗೊಂಡು | ಮ |
ತ್ತಿರದಾರ್ಭಟಿಸುತಲಂದು ||
ತರುವೆನು ತರುಣಿಯ ಪಿಡಿದು | ಎನು |
ತಿರದೆ ಒರಟ ಖಳನಂದು || ೧ ||

ಬರಬರುತಲಿ ನೋಡಿದನು | ಇವ |
ರಿರುವ ಪರಿಯನೆಲ್ಲವನು ||
ಕರೆಕರೆದೆಂದನು ನಿನ್ನ | ಸರ |
ಸರದೆಳೆದೊಯ್ವೆನು ಮುನ್ನ || ೨ ||

ಎನೆ ಕೇಳುತ ಬಾಲಕರು | ಬಹು |
ಘನದಸ್ತ್ರಗಳೊಟ್ಟಿದರು ||
ದನುಜನು ನುಂಗುತಲಾಗ | ಪಿಡಿ |
ದನು ಕಬರಿಯನತಿಬೇಗ || ೩ ||

ಖಳ ಕಬರಿಯ ಪಿಡಿಯುತ್ತ | ಲಿರ |
ದೆಳೆಯುವದನೆ ನೋಡುತ್ತ ||
ಕಳವಳಿಸುತ ಬೊಬ್ಬೆಯೊಳು | ಆ |
ಲಲನೆ ಇಂತೆನುತೊರಲಿದಳು || ೪ || || 224 ||

**ಆನಂದಭೈರವಿ - ಏಕ**
ಕೆಟ್ಟೆ ನಾನಕಟಕಟ | ಶಶಿಪ್ರಭೆ ಇಂದು |
ಅಟ್ಟಿದಳಿವನ ದಿಟ ||
ಕುಟ್ಟಿ ಕಳೆವಳೆನ್ನನು | ಮೋಹದೊಳಿವರ |
ದೃಷ್ಟಿಪೆನೆಂದಿಗಿನ್ನು || ೧ ||

ವರಹಮಾಲೆಯ ಗರ್ವದಿ | ಸುಂದರರ |
ಧುರದಿ ಗೆಲ್ಲುವಳ್ನಿಜದಿ ||
ಹರ ಹರಾ ಗೆದ್ದು ರಣದಿ | ಇವರುಗಳ |
ಶಿರವ ಹೊಯ್ಸುವಳು ಕ್ಷಣದಿ || ೨ || || 226 ||

**ವಾರ್ಧಕ**
ಎಂದು ನಾನಾಪರಿಯೊಳಳಲುತಂ ಬಳಲುತಂ ||
ಹಿಂದಿರುಗಿ ಕ್ಷಣಕ್ಷಣಕೆ ನೋಡುತಂ ಬಾಡುತಂ |
ಸುಂದರರ ಮೊಗ ನೋಡಿ ಮರುಗುತಂ ಕರಗುತಂ ಮೋಹಪರಳಾಗಿರಲ್ಕೆ ||
ಸುಂದರಿಯನೆಳೆದೊಯ್ವುದನ್ನೋಡಿ ಮನಗೂಡಿ |
ನಂದನರು ಚಿಂತೆಯೊಳಗಿರಲತ್ತ ಬಳಿಕಿತ್ತ |
ಮಂದಮತಿ ದನುಜೇಶ ಘನರೋಷಪರನಾಗಿ ಎಳೆದು ಸಭೆಯೊಳು ನಿಲಿಸಿದ || ೧ || || 227 ||

**ಭಾಮಿನಿ**
ನೋಡುತಾಗಳೆ ಶಶಿಪ್ರಭೆಯು ಛೀ |
ಮೂಢಳೇ ಎಂದೆನುತ ಘರ್ಜಿಸಿ |
ಮಾಡುವೆನು ನಿನಗೌಷಧವನೆನುತಾಗ ರೋಷದೊಳು ||
ಝಾಡಿಸುತ ಕರಗಳನೆ ಬಿಗಿಯುತ |
ಕಾಡಿನೊಳು ಕೊಂಡೊಯ್ದು ಶಿಕ್ಷೆಯ |
ಮಾಡೆನುತ ದಾನವನಿಗೊಪ್ಪಿಸುತಾಗ ಸೆಳೆದೊಯ್ದು || ೧ || || 228 ||

**ಕಂದ ಪದ್ಯ**
ಕರಗಳ ಬಂಧಿಸಿ ಕಾಡಿನೊ |
ಳಿರದೆ ಬಿಸುಟು ದನುಜೇಶಂ ತೆರಳಲು ವನದೋಳ್ ||
ಹರಹರ ಎನುತಾಗಲೆ ಮನ |
ದಿರವನು ಬಿತ್ತರಿಸುತ ದುಃಖಿಸುತಿಂತೆಂದಳ್ || ೧ || || 229 ||

**ಘಂಟಾರವ - ಏಕ**
ಹರಹರಾ ಈ ದುಃಖವನ್ನು |
ಹರುಷದಿಂದ ಯಾರೊಳಿದನು |
ಪೇಳಲಿ | ಹ್ಯಾಗೆ | ತಾಳಲಿ || ೧ ||

ವೀರರೊಡನೆ ಸೇರಿ ಸುಖ |
ಕೋರುವನಿತರೊಳಗೀ ದುಃಖ |
ಬಂದುದೆ | ಮನ | ನೊಂದುದೆ || ೨ ||

ಧುರದಿ ಗೆದ್ದು ವೀರರನ್ನು |
ತರುಣಿ ಶಶಿಪ್ರಭೆಯು ತಾನು |
ಪೊರೆವಳೊ | ಶಿರವ | ತರಿವಳೊ || ೩||

ಇಂತೆಂದು ಭ್ರಮರಕುಂತಳೆ |
ಚಿಂತೆಯಿಂದ ಮರುಗೀ ಮರುಗೀ |
ನೊಂದಳು | ಮನದಿ | ಬೆಂದಳು || ೪ || || 233 ||

**ಭಾಮಿನಿ**
ಕಮಲಧ್ವಜನನು ಕೂಡಿ ವನ ವಿ |
ಶ್ರಮದೊಳಗೆ ಮಾರ್ತಾಂಡನಿರುತಿಹ |
ಸಮಯದೊಳು ಕೇಳಿಸಿತು ರೋದನವಮಮ ಭೀಕರದಿ ||
ವಿಮಲಗುಣರಿದ ಕೇಳಿ ಪುಡುಕುತ |
ಕಮಲಮುಖಿಯನು ಕಂಡು ದುಃಖವ |
ತಮಿಸಿ ಕೇಳ್ದರು ಬಿಚ್ಚಿ ಕರಗಳ ಮಮತೆಯಿಂದೊಲಿದು || ೧ || || 234 ||

**ಮಾರವಿ - ಏಕ**
ಬಿಡು ಬಿಡು ದುಃಖವ | ನುಡಿಯನು ಪೇಳೆ |
ಮೃಡನತಿ ಹರುಷದೊಳು ||
ದಡಿಗನು ನಿನ್ನನು | ಪಿಡಿದೈದಿಹ ಪರಿ |
ಸಡಗರದೊಳು ಪೇಳು || ೧ ||

ಮಾರಿಗೆ ಹಬ್ಬವ | ಪೂರೈಸುತ ರಣ |
ಸೂರೆಗೊಳುತಲಿಂದು ||
ಶೂರ ದನುಜ ಖಳ | ವೀರನ ಬಡಿವೆವು |
ತೋರಿಸೆಲ್ಲಿಹನೆಂದು ||೨ ||

ಎನೆ ಕೇಳುತಲತಿ ವಿನಯದಿ ನುಡಿದಳು |
ಘನತರ ವಾಕ್ಯದೊಳು ||
ಮನದೊಳು ಶಶಿಪ್ರಭೆ | ನೆನೆಯಲು ಬರುವನು |
ದನುಜನು ರೋಷದೊಳು || ೩ ||

ಕಾಳಿಯ ಭಜಿಸುತ | ತಾಳಿಹ ವರಹದ |
ಮಾಲೆಯ ಬಲುಮೆಯೊಳು ||
ಗೋಳುಗುಟ್ಟಿಸುವಳು | ಸೋಲಿಸಿ ರಣದೊಳು |
ತಾಳುತ ದ್ವಿಗುಣಗಳೂ || ೪ || || 238 ||

**ಕೇದಾರಗೌಳ - ಝಂಪೆ**
ನೀನೆಂದ ಮಾತು ಕೇಳೆ | ಮನದೊಳನು |
ಮಾನ ಪುಟ್ಟುವದೀಗಲೆ ||
ಮಾನಿನಿ ಶಶಿಪ್ರಭೆಯನು | ಗೆಲ್ಲುವದ |
ಕೇನು ಮಾಡಲುಬೇಕಿನ್ನು || ೧ ||

ಗೆಲುವಾಸೆ ಈರ್ದಡೀಗ | ಪೇಳುವೆನು |
ಚೆಲುವಾದ ಮಾತ ಬೇಗ ||
ಲಲನೆಯಳ ಹಾರವನ್ನು | ತಪ್ಪಿಸಲು |
ಗೆಲುವಹುದು ನಿಮಗೆ ಇನ್ನು || ೨ ||

ಹಾರವನು ತರುವ ಹಾಗೆ | ಸರಿಯಾದ |
ದಾರಿಯನು ತೋರಿಸೆಮಗೆ ||
ಸಾರಿ ನೀನೆಂದ ವೋಲು | ಮುಂದಾಹ |
ಕಾರಿಯವ ಮಾಳ್ಪೆವೆನಲು || ೩ ||

ಇರುವುದಂಜನವೆನ್ನಲಿ | ಅದನೀಗ |
ಧರಿಸಿ ಪೋದರೆ ಭರದಲಿ ||
ಧರೆಯ ಜನರರಿಯದಂತೆ | ಮಾಲೆ ತರು |
ವರೆ ಸುಲಭವಹುದು ಮುಂತೆ || ೪ ||

ಎನುತಲದೃಶ್ಯಾಂಜನವನು | ತೋರುತತಿ |
ವಿನಯದಿಂದಿರುವುದನ್ನು ||
ತನಯರದ ನೋಡುತಾಗ | ಸನುಮತವಿ |
ದೆನುತಲದ ಕೊಂಡು ಬೇಗ || ೫ ||

ಕಮಲಧ್ವಜನಣ್ಣ ತಾನು | ಅಂಜನವ |
ನಮಮ ಪಣೆಯೊಳಗಿಟ್ಟನು ||
ಕಮನೀಯ ರೂಪು ಮಾಯ | ವಾದುದಾ |
ಸಮಯದೊಳಗಿದು ನಿಶ್ಚಯ || ೬ || || 244 ||

**ಭಾಮಿನಿ**
ಧರಿಸುತಂಜನವಾಕ್ಷಣದೊಳತಿ |
ಹರುಷದೊಳು ಬರಲಿತ್ತ ದ್ವಾರದಿ |
ಪರಿಕಿಸದೆ ಮಾತಾಡದಿರಲದ ತಿಳಿದು ಒಳಪೊಕ್ಕು ||
ಸರಸದೊಳು ಒಡ್ಡೋಲಗದ ವಿ |
ಸ್ತರವ ಕಾಣುತ ಮುಂದೆ ಗಮಿಸಲು |
ಹರುಷಮುಖಿ ಶಯನಿಸಿದ ಮಂಚವ ಕಂಡನಾಕ್ಷಣದಿ || ೧ || || 245 ||

**ಹಿಂದುಸ್ಥಾನಿ ಕಾಪಿ – ರೂಪಕ ( ತಾಳ್ ತಾಳ್ ಇದು ಸಮಯವಲ್ಲ ಎಂಬಂತೆ )**
ಅರರೆ ಇದುವೆ ಸಮಯ ಭಲಾ |
ದೊರೆತುದು ಬಂದುದಕೆ ಫಲಾ |
ವರಹಮಾಲೆ ಧರಿಸಲಿಲ್ಲಾ |
ಬರಿದೆ ಒರಗಿಹಳು ಸುಳ್ಳಲ್ಲಾ || ಅರರೆ || ಪ ||
ಮಾಲೆ ಇಹುದು ಮಂಚಕರದ |
ಮೇಲೆ ಇದುವೆ ಏನು ಭೇದ ||
ಶ್ರೀಲಲಾಮ ಗೈದನಿಂದು |
ಪಾಲಿಸಲ್ಕೆ ನಮ್ಮನೆಂದು || ಅರರೆ || ೧ ||

ಝಗ ಝಗಿಸುವ ವರಹಮಾಲೆ |
ತೆಗೆದು ಧರಿಸುವೆನು ಆಮೇಲೆ ||
ಮುಗುಧೆ ಏನ ಮಾಳ್ಪಳೆಂದು |
ನಗುತ ನೋಳ್ಪೆ ಮರೆಯೊಳ್ನಿಂದು || ಅರರೆ || ೨ || || 247 ||

**ದ್ವಿಪದಿ**
ಎನುತಲಾ ಮಾಲೆಯನು ಮಾರ್ತಾಂಡ ತಾನು |
ವಿನಯದಿಂ ತೆಗೆದು ಗ್ರೀವದೊಳು ಧರಿಸಿದನು || ೧ ||

ಇತ್ತ ಶಶಿಪ್ರಭೆ ನಿದ್ರೆಯಿಂದೆದ್ದು ಬೇಗ |
ಹಸ್ತದೊಳು ತಡವರಿಸೆ ಸರವಿಲ್ಲದಾಗ || ೨ ||

ಪುಡುಪುಡುಕಿ ನೋಡಿದರು ಸರ ಕಾಣದಿರಲು |
ಗಡಿಬಿಡಿಸಿ ಮೂರ್ಛೆ ಬಿದ್ದೆದ್ದು ಮರುಗಿದಳು || ೩ || || 250 ||

**ಜಂಜೂಟಿ – ರೂಪಕ (ಆರ ವಶವಾದುದೋ ಭಂಗಾರದುಂಗುರಾ ಎಂಬಂತೆ)**
ಆರ ಕೈ | ಸೇರಿತೋ ಭಂ | ಗಾರ ಹಾರವು || ಪ ||
ಯಾರು ಬಂದು | ತೋರದಂತೆ |
ಸಾರಿ ಒಯ್ದರು || ಆರ || ಅ. ಪ. ||
ಹರನ ಸತಿಯ | ಕರುಣದಿಂದ | ಧರೆಯ ಮೇಲಕೆ |
ಅರಸಿ ಎನಿಸಿ | ಮೆರೆಸಿದಂತ | ವರಹ ಮಾಲಿಕೆ || ಆರ || ೧ ||

ಬಂದುದೆಲ್ಲಾ | ಬರಲಿ ಹಾರ | ಒಂದು ದೊರಕಲಿ ||
ಎಂದು ಪುಡುಕಿ | ಪುಡುಕಿ ಮನದಿ | ನೊಂದಳೀ ಪರಿ || ಆರ || ೨ || || 252 ||

**ಆನಂದಭೈರವಿ - ರೂಪಕ**
ಹರನೇ ಶಂಭುವೆ ಪಾರ್ವತಿ |
ವರನೇ ಮುಂದೆನಗೇನ್ಗತಿ ||
ವರಹಮಾಲೆಯ ಗರ್ವದಿ |
ಮೆರೆದೆ ನಾನು ದಯದಿ || ಹರನೇ || ಪ ||
ತುಂಗಬಲಾನ್ವಿತೆ ಸಚಿವೆಯ |
ಭಂಗವ ಬಡಿಸಿದೆ ನಿಶ್ಚಯ ||
ಹಿಂಗಿತೆ ಶೌರ್ಯಗಳೆಲ್ಲವು |
ಕಂಗೊಳಿಸದೆ ಸರವು || ಹರನೇ || ೧ ||

ಸತಿಯಾದರು ರಾಜ್ಯಕ್ಕಧಿ |
ಪತಿಯೆನಿಸಿದೆನತಿ ಧೈರ್ಯದಿ ||
ಕ್ಷಿತಿಯೊಳು ಮೆರೆಸಿದ ಹಾರವು |
ಗತಿಸಿತೆ ಹಾ ವಿಧಿಯೇ || ಹರನೇ || ೨ || || 254 ||

**ಕೇದಾರಗೌಳ - ಅಷ್ಟ**
ತರುಣಿಯು ಮನದೊಳು | ತರಹರಗೊಳುತೀರ್ಪ |
ಪರಿಯನರಿತು ಬೇಗದಿ ||
ಕರುಣದೊಳಂಜನ | ವರಸುತ್ತ ಮಾರ್ತಾಂಡ |
ನಿರದೆ ಪೇಳಿದ ದಯದಿ || ೧ ||

ಬರಿದೆ ದುಃಖಿಸಬೇಡ | ಸರವಿಹುದೆನ್ನಯ |
ಕರದೊಳು ನೋಡು ನೀನು ||
ಶರಣಳಾದರೆ ನಿನ್ನ | ಕರುಣದಿ ರಕ್ಷಿಪೆ |
ಕರಕರೆಗೊಳದಿರಿನ್ನು || ೨ ||

ಎನಲಾ ಮಾತನೆ ಕೇಳಿ | ಮನದಿ ರೌದ್ರವ ತಾಳಿ |
ಘನ ರೋಷದೊಳು ಪೇಳ್ದಳು ||
ನಿನಗೆ ನಾ ಶರಣು | ಎನಲು ಬೇಕೇ ತಸ್ಕರ |
ಎನುತ ಧಿಕ್ಕರಿಸಿದಳು || ೩ ||

ಸಾರಿ ಪೇಳುವುದೆಮ್ಮ | ಶೂರರ ಬಿರಿದಿದು |
ಧಾರುಣಿಯೊಳಗೀಗಳೆ ||
ನಾರಿ ನಾ ನಿನಗೆ ತೋ | ರಿಹೆನೆಂದು ಪೊರಮಟ್ಟು |
ಸೇರಿದ ವನಕಾಗಳೆ || ೪ || || 258 ||

**ಭಾಮಿನಿ**
ಕಮಲಧ್ವಜನಿರುವಲ್ಲಿ ಪೋಗಲು |
ರಮಣಿ ಕಳವಳಿಸುತ್ತ ಧೈರ್ಯದೊ |
ಳಮಮ ಯುದ್ಧದಿ ಮಾಲೆಯನು ಪಿಂತಿರುಗಿ ತಹೆನೆನುತ ||
ಕಮಲಗಂಧಿನಿಯೊಡನೆ ಪೇಳ್ದಳು |
ಕ್ರಮದಿ ಸೇನೆಯು ಪೊರಡಲೀಕ್ಷಣ |
ಸಮರಕೆನುತಪ್ಪಣೆಯ ಕೊಡುತೆದ್ದಳು ಮಹಾಹವಕೆ || ೧ || || 259 ||

**ಶಂಕರಾಭರಣ - ರೂಪಕ**
ಪೊರಟುದಾಗ ನಾರಿ ಸೇನೆಯು | ಧುರಕೆ ಕೂಡಿ |
ಪೊರಟುದಾಗ ನಾರಿ ಸೇನೆಯು || ಪ ||
ವೀರ ತರಳೆಯರುಗಳೆಲ್ಲ |
ಶೂರತನದಿ ಪುರುಷರುಗಳ |
ಸೂರೆ ಗೊಂಬೆವೆನುತಲು |
ಬ್ಭೇರಿ ಸಂಭ್ರಮದೊಳು ಕೂಡಿ ||
ಪೊರಟುದಾಗ ನಾರಿ ಸೇನೆಯು || ೧ ||

ಪಾತಕಾದಿ ಸಕಲ ಸ್ತ್ರೀಯ |
ಕೂಟ ಕೂಡಿಬರುತಲಿಂದು |
ನೋಟಕರಿಗೆ ಭೀತಿಯವರ್ಗ |
ಳಾಟದಿಂದ ತೋರ್ಪ ತೆರದಿ ||
ಪೊರಟುದಾಗ ನಾರಿ ಸೇನೆಯು || ೨ ||

ಕರದಿ ಬತ್ತೀಸಾಯುಧಗಳ |
ಧರಿಸಿ ಪೊರಟ ರಭಸಕವರ |
ಧರಣಿ ತಾಳಲಾರದಹಿಯ |
ಶಿರವು ಕುಗ್ಗಿತೆಂಬ ತೆರದಿ ||
ಪೊರಟುದಾಗ ನಾರಿ ಸೇನೆಯು || ೩ || || 262 ||

**ಭೈರವಿ - ತ್ರಿವುಡೆ**
ಏನನೆಂಬೇ | ಸಾಹಸ | ಏನನೆಂಬೇ || ಪ ||
ಏನನೆಂಬೆನು | ಮಾನಿನೀಯರ |
ಸೇನೆ ಬರುವದ ನೋಡುತ ||
ಮಾನನಿಧಿ ಕಮಲಧ್ವಜನು ತಾ |
ಬಾಣವನು ಬಿಡು | ತಡ್ಡಗಟ್ಟಿದ || ಏನನೆಂಬೇ || ೧ ||

ತುಂಬಿ ಬಂದಿಹ | ವೀರ ನಾರಿ ಕ |
ದಂಬವನು ಪುಡಿಗೈವುತ ||
ಕುಂಭಿನಿಯು ಬಾಯ್ | ಬಿಡುವ ತೆರದೊಳ |
ಗಂಬನೆಸೆಯುವ ಸಂಭ್ರಮಗಳ ನಾ | ನೇನನೆಂಬೇ || ೨ ||

ನಾರಿ ಸೇವೆಯು | ಚದರಿ ಪೋಗುವ |
ಕಾರಣವ ತಾ ನೋಡುತ ||
ವೀರಳಾಗಿಹ | ಕಮಲಗಂಧಿಯು |
ಭಾರಿ ಧನು ಪಿಡಿ | ದಾರುಭಟಿಸಿದ | ಳೇನನೆಂಬೇ || ೩ || || 265 ||

**ಶಂಕರಾಭರಣ - ಮಟ್ಟೆ**
ನಾರಿ ಸೇನೆಯನ್ನು ಗೆದ್ದು ವೀರನಾಗಿಹೆ |
ಶೂರತನಗಳಿರಲು ತೋರು ರಣಕೆ ಬಂದಿಹೆ ||
ಗಾರುಗೆಡಿಸಿ ಯುದ್ಧ ಸಾಕು ಸಾಕು ಎನಿಸುವೆ |
ಧೀರ ನಾರಿಯೆಂಬ ಪರಿಯ ಪೂರ ತೋರುವೆ || ೧ ||

ನಾರಿಯರನು ಗೆಲ್ವ ನುಡಿಗಳಿರಲದಾಚೆಗೆ |
ಶೂರರಾದ ನಾಕದವರು ಬರಲದೊಮ್ಮೆಗೆ ||
ತೋರಿಸುವೆನು ಚಳಕವೆನುತಲಾಗ ಶೌರ್ಯದಿ |
ಭಾರಿ ಧನುವಗೊಂಡು ಎಸೆದನಸ್ತ್ರ ಸತ್ವದಿ || ೨ ||

ಎಸೆದ ಶರವ ನಡುವೆ ಕತ್ತರಿಸಿ ರೋಷದಿ |
ಬಿಸಜಗಂಧಿ ನುಡಿದಳಾಗ ರೌದ್ರವೇಷದಿ ||
ಕುಸುಮಚಾಪಪಿತನ ಪಾದ ಸ್ಮರಿಸೆನುತ್ತಲಿ |
ಮಸೆದ ಕಣೆಯನೆಸೆದಳಾಗ ಎಣಿಕೆಯಿಂದಲಿ || ೩ ||

ಎಣಿಕೆಯಿಂದಲೆಸೆದ ಶರಕೆ ಗಣನೆಗೊಳ್ಳದೆ |
ಕ್ಷಣದಿ ಸವರಿ ನುಡಿದನಾಗ ದಣಿದುಕೊಳ್ಳದೆ ||
ರಣದಿ ಬೀಳು ಬೀಳೆನುತ್ತ ಧನುವಗೊಂಡನು |
ಕಣೆಯನೆಚ್ಚುಮೂರ್ಛೆಗೊಂಡಳೆನುತ ಕಂಡನು || ೪ || || 269 ||

**ಭಾಮಿನಿ**
ಕಮಲಗಂಧಿಯು ಮೂರ್ಛೆಗೊಳಲಾ |
ಸಮಯದೊಳು ಶಶಿಪ್ರಭೆಯು ರೋಷದಿ |
ಸಮರಕನುವಾಗುತ್ತ ನಿಲ್ಲಲು ಕಾಣುತಾಕ್ಷಣದಿ ||
ಕಮಲಧ್ವಜನಿವನಣ್ಣ ಮುಂದಾ |
ಕ್ರಮಿಸಿ ಯುದ್ಧಕೆ ತಾನೆ ನಿಲ್ಲುತ |
ಕ್ರಮವರಿತು ನುಡಿಸಿದನು ಶಶಿಪ್ರಭೆಯನು ನಯೋಕ್ತಿಯಲಿ || ೧ || || 270 ||

**ಶಂಕರಾಭರಣ – ರೂಪಕ**
ನೋಡಿ ನೋಡಿ ಪುನಹ ಯುದ್ಧ | ಮಾಡ ಬಂದೆಯ ||
ರೂಢಿಯೊಳಗೆ | ಮೂಢಳಹೆ ನೀ | ನೋಡು ನಿಶ್ಚಯ || ೧ ||

ಮೂಢರೆಂಬ ಮಾತು ನಿಮಗೆ | ಒಪ್ಪುತಿರುವುದು ||
ನಾಡ ತೊರೆದು | ಕಾಡ ಚರಿಪ | ಕಾರಣವಿದು || ೨ ||

ಹೆಮ್ಮೆ ಬಿಟ್ಟು ನಮ್ಮ ಪಾದ | ಒಮ್ಮೆ ಪಿಡಿದರೆ ||
ನಿಮ್ಮ ರಕ್ಷಿಸುವೆನು ಬಿಡದೆ | ಧರ್ಮದಿಂದಲೇ || ೩ ||

ಶರಣು ಗೈವೆ ನೋಡೆನುತ್ತ | ಶರವ ಪೂಡಲು ||
ಬರುವ ಸರಳ ಕತ್ತರಿಸಲು | ಜರಿದು ನುಡಿದಳು || ೪ || || 274 ||

**ಮಧ್ಯಮಾವತಿ - ಅಷ್ಟ**
ಜಾಣನಹುದೆಲವೋ | ತಸ್ಕರದಿ ಪ್ರ |
ವೀಣನಹುದೆಲವೋ || ಪ ||
ಕಳವಿನೊಳ್ಸರವ ಕದ್ದೊಯ್ವ | ವಿದ್ಯೆ |
ತಿಳಿಸಿದ ಗುರುವ್ಯಾವ ಚೆಲುವ ||
ಘಳಿಲನೆ ಮನೆ ಪೊಕ್ಕು | ತಿಳಿಯದಂದದಿ ಮಾಲೆ |
ಚಳಕದೊಳೊಯ್ದೆಯಲ್ಲಾ || ನಿದ್ರೆಯೊಳು ನಾ |
ಮಲಗಿರ್ದ ಪರಿಯನೆಲ್ಲಾ || ಕಂಡುದರಿಂದ |
ಸುಲಭವಾಯ್ತೆಲವೊ ಖೂಳಾ || ತಸ್ಕರದಿ ಪ್ರ |
ವೀಣನಹುದೆಲವೋ || ೧ ||

ತರುಣಿಯರನು ಗೆದ್ದೆನೆಂದು | ಹೆಮ್ಮೆ |
ಮೆರೆಯಲು ಬಿಡೆನು ನಾನಿಂದು ||
ಧುರದಿ ನಿನ್ನನು ಬಹು | ಪರಿಯಿಂದ ಸೋಲಿಸಿ |
ಸರವ ಕೊಂಡೊಯ್ವೆ ನೋಡು || ಭೀತಿಗಳಿರೆ |
ಸೆರಗೊಡ್ಡಿ ಎನ್ನ ಬೇಡು || ಅಲ್ಲದಿರೆ ಸಂ |
ಗರಕೆ ಸನ್ನದ್ಧ ಮಾಡು || ತಸ್ಕರದಿ ಪ್ರ |
ವೀಣನಹುದೆಲವೋ || ೨ || || 276 ||

**ಭೈರವಿ - ಅಷ್ಟ**
ಎನಲಾ ಮಾತನೆ ಕೇಳುತ | ಮಾರ್ತಾಂಡತೇ |
ಜನು ಪೇಳ್ದ ತಾ ನಗುತ ||
ಜುಣುಗು ಮಾನಿನಿಯರ | ಗರ್ವವನಿಳಿಸಲಾ |
ನಿನಿತು ಗೈದೆನು ವಿಹಿತ || ೧ ||

ಏನು ಗೈದರು ಬಿಡೆನು | ಮಾನಿನಿಯರ |
ತ್ರಾಣವನೆಲ್ಲವನು ||
ಕ್ಷೋಣಿಯೊಳಗೆ ತೋರ್ಪೆ | ನೆನುತ ಬಿಟ್ಟಳು ಪೊಸ |
ಸಾಣೆಯ ಕಣೆಗಳನು || ೨ ||

ಬಿಟ್ಟ ಶರವ ತರಿದು | ಶೌರ್ಯದಿ ಬಹು |
ಘಟ್ಟಿಯೋಳ್ಬೊಬ್ಬಿರಿದು ||
ಥಟ್ಟನೆ ಕರದ ಬಿ | ಲ್ಲಿಗೆ ಶರವೆಸೆಯಲು |
ಕುಟ್ಟಿ ಮುಕ್ಕಡಿಗೈದುದು || ೩ || || 279 ||

**ಭಾಮಿನಿ**
ಧನುವು ಮುರಿಯಲು ಮನದೊಳಗೆ ನೆನೆ |
ನೆನೆದು ಚಿಂತಿಸುತಾಗ ನುಡಿದಳು |
ಘನ ವಿರೋಧಿಗಳೈಸೆ ನಿಮ್ಮನು ಬಿಡದೆ ನಾನೀಗ ||
ವಿನಯದೊಳು ಮಾತುಳನೊಳೆಲ್ಲವ |
ನನುಕರಿಸಿ ಪೇಳುತ್ತಲೀಕ್ಷಣ |
ರಣದೊಳಗೆ ಪಿಡಿಸುವೆನೆನುತ ಪೊರವಂಟಳಾ ಕ್ಷಣದಿ || ೧ || || 280 ||

**ಕಾಂಬೋಧಿ - ಝಂಪೆ**
ಇತ್ತ ಕೇರಾಳಕಧಿ | ಪತಿಯಾದ ಮೇಧಾವಿ |
ಸತ್ಯ ನಿಧಿ ಸುಗುಣಿ ಎಂದೆನಿಸಿ ||
ಪೃಥ್ವಿಯನೆ ಪಾಲಿಸುತ |  ಚಿತ್ರಭಾನುವೆನಿಪ್ಪ |
ಮತ್ತಕಾಶಿನಿಯೊಡನೆ ಬೆರೆಸಿ || ೧ ||

ಇರುತೀರ್ದ ಚತುರನೆಂ | ದೆನಿಪ ಸಚಿವನ ಸಹಿತ |
ಮೆರೆವ ನಕ್ಷತ್ರಧ್ವಜನೆಂಬ ||
ಕರುಣನಿಧಿಯಾದ ತ | ಮ್ಮನ ಕೂಡಿ ರಾಜ್ಯಮಂ |
ಪೊರೆದು ಹರಿಭಕ್ತನೆನಿಸೀರ್ದ || ೨ ||

ಇನಿತು ಸಂತಸದೊಳಿರು | ವನಿತರೊಳು ಸೌಭಾಗ್ಯ |
ವನಧಿಯಂತೆಸೆವ ಬಾಲಕನು ||
ಘನಮೂಲ ತಾರೆಯಲಿ | ಜನಿಸಿ ಶಶಿಹಾಸನೆಂ |
ದೆನಿಸಿದನು ಬೆರಳಾರರವನು  || ೩ ||

ಈತ ಪುಟ್ಟಿದ ಘಳಿಗೆ | ನೂತನವ ನೋಡಿ ಬಹು |
ಭೀತಿಯೊಳಗಿರುತೀರ್ದನತ್ತ ||
ಖ್ಯಾತೆ ಶಶಿಪ್ರಭೆಯು ಪುರ | ಕಾತುರದಿ ಬಂದ ಪರಿ |
ಪ್ರೀತಿಯೊಳು ಚರರೆಂದರಿತ್ತ || ೪ ||  || 284 ||

**ಮುಖಾರಿ – ಏಕ  (ಲಾಲಿಸಿ ಕೇಳ್ ವೈರೋಚನಿ ಧೊರೆಯೇ ಎಂಬಂತೆ )**
ಲಾಲೀಸಿ ಕೇಳ್ಕೇರಳಕಧಿಪತಿಯೆ |
ಪೇಳುವುದ ಸುಮತಿಯೆ || ಲಾಲಿಸಿ || ಪ ||
ಬಂದೆವು ಮುಂದೆ ನೊಂದು ಮನದಿ | ಎಂದಿನವೋಲ್ಲುಮ್ಮದದೀ |
ನಿಂದೂ ನಾವಿರಲು ಉದ್ಯಾನವನದಿ ||
ಹಿಂದೆ ನೋಡಲು ಮನ | ಗುಂದಿ ಕಣ್ಣೊಳು ನೀರ್ |
ತಂದು ಶಶಿಪ್ರಭೆ | ಬಂದ ಹದನಗಳ |
ಒಂದನುಳಿಯದಾವ್ | ಚಂದದೊಳುಸುರುವ |
ದಂದುಗವನೆ ಕೇ | ಳಿಂದು ನಮ್ಮಂದೆಯೆ || ಲಾಲಿಸಿ || ೧ ||

ಅರಿಗಳು ಬಂದು ಸ್ತ್ರೀ ರಾಜ್ಯದೊಳು | ಮೆರೆದಿಹ ಪರಿ ಕೇಳೂ |
ಧುರದೊಳೀರ್ವರೆ ತರಳರುಗಳು ||
ನೆರೆದಿಹ ಸತಿಯರ | ನೆರವಿಯ ಯುದ್ಧದಿ |
ಪರಿಭವಗೊಳಿಸಲು | ಭರದಿ ನಿನ್ನೊಳಗಿದ |
ನರುಹುವೆನೆನುತೈ | ತರುತ ಕಾದಿರುವಳು |
ಪುರ ದ್ವಾರದಿ ತವ | ಬರವ ನಿರೀಕ್ಷಿಸಿ || ಲಾಲಿಸಿ ಕೇಳ್ || ೨ ||  || 286 ||

**ಭಾಮಿನಿ**
ಎಂದ ವನಪಾಲಕರ ನುಡಿಯ ಕೇ |
ಳ್ದಂದು ತಾ ಮೇಧಾವಿ ನುಡಿದನು |
ಮಂದಮತಿಗಳು ನೀವು ತರುಣಿಯ ಕರೆತರದೆ ಹೀಗೆ ||
ಬಂದಿರೇತಕ್ಕೆನುತ ಘರ್ಜಿಸೆ |
ನೊಂದು ಪಿಂದಕೆ ಬಂದು ಚಾರರು |
ಸುಂದರಿಯ ಪೆಗಲೇರಿಸುತ ಕರೆತರಲು ನುಡಿಸಿದನು || ೧ ||  || 287 ||

**ರೇಗುಪ್ತಿ - ತ್ರಿವುಡೆ**
ತರಳೆ ಏನಿದು ಮನದಾ | ದುಗುಡವ ಸ |
ತ್ವರದೊಳು ಪೇಳು ಬೇಗ ||
ಭರದಿ ನೀ ಬಂದಿಹ | ಪರಿಯನರಿತು ಬೇಗ |
ಒರೆದು ಎನ್ನಯ ಮನ | ಹರುಷವ ಗೊಳಿಸೀಗ || ೧ ||

ಧರಣಿಗೊಡತಿ ಎನ್ನಿಸೀ | ಇದ್ದವಳು ನೀ |
ಪೊರಟು ರಾಜ್ಯವ ತ್ಯಜಿಸಿ ||
ತರಹರಿಸುತ ಮನ | ಕರಕರೆಗೊಳ್ಳುವ |
ಪರಿಯನೆಲ್ಲವನೀಗ | ಅರುಹೆನ್ನೊಳತಿ ಬೇಗ || ೨ ||

ಎಂದ ನುಡಿಯ ಕೇಳುತ | ಕಣ್ಣೊಳು ನೀರು |
ತಂದು ಪೇಳಿದಳು ಮಾತ ||
ಇಂದು ಕಾಯ್ವವರಿಲ್ಲ | ವೆಂದು ಬಂದೆನು ನಿನ್ನ |
ಮಂದಿರಕಾಗಿ ನಾ | ಸಂದೇಹಗೊಳ್ಳದೆ || ೩ || || 290 ||

**ಕೇದಾರಗೌಳ - ಝಂಪೆ**
ಮಾವ ನೀನಾಲಿಸುವದು | ಪೇಳುವೆನು |
ಭಾವಶುದ್ಧಿಯೊಳಗೊಲಿದು ||
ಸೇವಕಿಯರೊಡನೆ ನಾನು | ಸಾಮ್ರಾಜ್ಯ |
ಠೀವಿಯೊಳಗೆಸೆದೀರ್ದೆನು || ೧ ||

ಕಾಳಿಕೆಯ ಕರುಣದಿಂದ | ಪಡೆದ ವರ |
ಮಾಲಿಕೆಯ ಬಲುಮೆಯಿಂದ ||
ಪಾಲಿಸುತ ರಾಜ್ಯವನ್ನು | ಸುಖಸೌಖ್ಯ |
ಲೋಲೆಯಾಗಿರುತೀರ್ದೆನು || ೨ ||

ಇರುತಿರುವ ಸಮಯದೊಳಗೆ | ಪುರುಷರಿ |
ಬ್ಬರು ಬಂದು ಕಾಡಿನೊಳಗೆ ||
ಇರುವ ವನಪಾಲಕಿಯರ | ಭಂಗಿಸುತ |
ಮೆರೆವರೆಂಬಿನಿತು ವಿವರ || ೩ ||

ತಿಳಿದು ಸಚಿವೆಯನು ರಣಕೆ | ಕಳುಹಿಸಲು |
ಸಿಲುಕಿದಳವರ್ಮೋಹಕೆ ||
ಚೆಲುವೆಯನು ಪಿಡಿತರಿಸುತ | ಭಂಗಿಸಲು |
ತಿಳಿಸಿದಳು ಒಳವನಿನಿತ || ೪ ||

ಕೇಳಿ ಒಳವೆಲ್ಲ ತಿಳಿದು | ಮಲಗಿರ್ದ |
ವೇಳೆಯಲಿ ಮೆಲ್ಲ ಬಂದು |
ಮಾಲಿಕೆಯ ಕದ್ದೊಯ್ದರು | ರಣದೊಳಗೆ |
ಪೇಳಲೇನ್ ಭಂಗಿಸಿದರು || ೫ || || 295 ||

**ಭಾಮಿನಿ**
ರಣದೊಳಗೆ ಎಮ್ಮಿವನೆ ಇಬ್ಬರೆ |
ಕೆಣಕಿ ಗೋಳ್ಗುಟ್ಟಿಸಿದ ಪರಿಯನು |
ನೆನೆಯಲೆದೆ ತಲ್ಲಣಿಸುವುದು ಕಳವಳವಗೊಳುತೀಗ ||
ಘನಪರಾಕ್ರಮಿ ನಿನ್ನ ಪಾದವ |
ನನುವರಿತು ಪಿಡಿದಿಹೆನು ಎಮ್ಮನು |
ಕೆಣಕಿದವರನು ಭಂಗಿಸುತ ರಕ್ಷಿಸಲು ನೀನೆ ಗತಿ || ೧ || || 296 ||

**ವಾರ್ಧಕ**
ಎಂದು ಪದಕೆರಗಿ ಪೊರಳುವ ತರಳೆಯಂ ಪಿಡಿದು |
ಮಂದಮತಿಗಳನೀಗ ರಣದೊಳಗೆ ಸೋಲಿಸುತ |
ತಂದು ನಿನ್ನೊಶಕೀವೆ ಬೆದರಬೇಡೆನುತಭಯಮನ್ನಿತ್ತು ಸಂತವಿಸುತ ||
ಅಂದು ಚತುರನೆನಿಪ್ಪ ಸಚಿವನಂ ಕರೆದು ಇಂ |
ತೆಂದನೀ ಕ್ಷಣ ರಣಕೆ ಸನ್ನದ್ಧನಾಗಿ ನಾ |
ನಿಂದು ಪೊರಡುವೆ ಸೈನ್ಯಮಂ ಕೂಡಿಸೆನಲಾಗ ವಂದಿಸುತಲಿಂತೆಂದನು || ೧ || || 297 ||

**ಸಾರಂಗ - ಅಷ್ಟ**
ಕೇಳು ಮೇಧಾವಿರಾಯ | ನಿನ್ನೊಡನೆ ನಾ |
ಪೇಳುವ ನುಡಿಯ ಜೀಯ || ಪ ||
ಕಾಳಗದೊಳು ವೀರ | ಬಾಲರ ಪಿಡಿದು ನಾ |
ಲೀಲೆಯೊಳ್ಬರುವೆನು | ಪಾಲಿಸಪ್ಪಣೆಯನ್ನು || ಅ. ಪ. ||
ಏನು ಮಂತ್ರಿಯೆ ಬಾಲರ | ಗೆಲ್ಲುವುದನು |
ಮಾನ ತೋರ್ಪುದು ಬವರ ||
ನೀನು ಪೋಗುವುದು ಪಂ | ಚಾನನನಿದಿರಿನೊ |
ಳಾನೆ ಪೋದಂತಪ | ಮಾನವಪ್ಪುದು ನಿಜ || ೧ ||

ಧುರದಿ ಬಾಲರನೆ ಕೊಂಡು | ಬಾರದಿರೆ ನಾ |
ಧರೆಯೊಳು ಮೆರೆವ ಗಂಡು ||
ಬಿರುದ ತ್ಯಜಿಸಿಬಿಟ್ಟು | ಕರದಿ ಬಳೆಯ ತೊಟ್ಟು |
ಪೊರಡುವೆ ಭಾಷೆಯ | ವಿರಚಿಸಿ ನಿಶ್ಚಯ || ೨ ||

ಎನಲಾ ಮಾತನೆ ಕೇಳುತ | ಮೇಧಾವಿಯು |
ರಣಕೆ ವೀಳ್ಯವನೆ ಇತ್ತ ||
ಕ್ಷಣದಿ ವಂದಿಸಿ ಪೊರ | ಟನು ಮಂತ್ರಿ ಸೇನೆಯ |
ಗಣನೆಯೊಳರ್ಧಕ್ಷೋ | ಹಿಣಿ ಬಲ ಸಹಿತಲಿ || ೩ || || 300 ||

**ಶಂಕರಾಭರಣ - ಮಟ್ಟೆ**
ಬಂದನಾಗ ಮಂತ್ರಿ ಚತುರನು || ಪ ||
ಸ್ಯಂದನವನೇರುತ್ತ ಬಾಲ |
ರಂದವನ್ನು ನೋಳ್ಪೆನೆನುತ || ಬಂದನಾಗ || ಅ. ಪ. ||
ಬಂದನಾಗ ವೀರಸೇನೆ |
ವೃಂದದೊಡನೆ ರಥ ಪದಾತಿ |
ಸಂದಣಿಯನೆ ಕೂಡಿ ಬಹಳಾ |
ನಂದದಿಂದ ಕಂಗೊಳಿಸುತ ||
ಲಂದು ಮೆರೆವ ಛತ್ರ ಬಿರಿದಿ |
ನಿಂದ ಬರುವ ಭರಕೆ ವೀರ |
ಬಂದನೆಂದು ಕಹಳೆ ವದರು |
ವಂದು ಚಂದದಿಂದ ರಣಕೆ || ಬಂದನಾಗ || ೧ ||

ಏನನೆಂಬೆ ಬಳಿಕ ವೀರ |
ಸೇನೆ ಮುಂದೆ ಮುಂದೆ ಬರುತ |
ಕಾನನದೊಳು ತಿರುಗಿ ಬಹಳ |
ಬೇನೆಯಿಂದ ಕಳವಳಿಸುತ |
ಹಾನಿಗಯ್ವ ಬಾಲರನ್ನಿ |
ಧಾನದಿಂದ ಪುಡುಕುತೊಡನೆ |
ಏನು ಎಲ್ಲಿ ಹುಡುಗುರೆನುತ |
ನಾನಾತೆರದಿ ಘರ್ಜಿಸುತ್ತ || ಬಂದನಾಗ || ೨ || || 302 ||

**ಕಾಂಬೋಧಿ - ಝಂಪೆ**
ಇತ್ತ ಬಾಲಕರು ವನದೊಳು | ಭ್ರಮರಕುಂತಳೆಯ |
ಅತ್ಯಧಿಕವಾದ ದುಃಖವನು ||
ಪ್ರತ್ಯೇಕ ಗೈದು ಸಂತವಿಸುತಿರಲನಿತರೊಳು |
ಮುತ್ತಿದುದು ಬಲ ತರಳರನ್ನು || ೧ ||

ಬರುವ ಭರವನೆ ಕಂಡು | ಕರದಿ ಧನು ಶರಗೊಂಡು |
ಪೊರವಂಟು ಪಿರಿಯನಾಕ್ಷಣದಿ ||
ಹರಿಯ ಪಾದವ ನೆನೆದು | ಧುರದಿ ಶಿರವನೆ ತರಿದು |
ಬರಿ ಗಯ್ದ ಸೇನೆಯರೆಕ್ಷಣದಿ || ೨ ||

ಬಲವು ಮುರಿಯಲು ಕಂಡು | ಛಲವೇರಿ ಸಚಿವ ತಾ |
ನಳುಕದ್ಯೆತಂದು ಸಂಗರದಿ ||
ಭಳಿಭಳಿರೆ ವೀರನಹೆ | ಕೊಳುಗುಳದೊಳೆನುತ ಬಲು |
ಬಿಲುಗೊಂಡು ನಿಂತು ಝೇಂಕರಿಸಿ || ೩ ||

ಬಿಲು ಧ್ವನಿಯು ತೋರಿದಡೆ | ಕೊಳುಗುಳದಿ ಬೆದರುವೆನೆ |
ಛಲವೀರ್ದಡನುವಾಗು ಬೇಗ ||
ಗೆಲುವಾಸೆ ಬೇಡವರೆ | ಘಳಿಗೆಯೊಳು ತೋರ್ಪೆ ಯಮ |
ನಿಳೆಯವನು ನೋಡು ನೀನೀಗ || ೪ ||

ಚೋರರಂದದಿ ಕುರುಹ | ತೋರಿಸದೆ ಮಾಲೆಯನು |
ಜಾರಿಸಿದ ತಸ್ಕರರು ಜವದಿ ||
ಸೇರುವುದು ಸಹಜ ಜವ | ನೂರಿಗೀಕ್ಷಣ ನಿಮಗೆ |
ತೋರುವೆನು ಪಥವ ಶರ ಮುಖದಿ || ೫ ||

ಮರುಳೆ ಕೇಳ್ ಚೋರರೆನು | ತೊರೆಯದಿರು ನಾ ಗೈದ |
ಪರಿಯು ಬೇರಿಹುದು ನಾರಿಯರು ||
ಪುರುಷರಂ ಧಿಕ್ಕರಿಸಿ | ಮೆರೆದಿರುವ ಪೌರುಷವ |
ನೊರೆಸಲ್ಕೆ ಗೈದ ಯುಕ್ತಿಗಳು || ೬ ||

ಅಂಬರದೊಳಿಹವುಡು ಕ | ದಂಬವನು ವರಸಲ್ಕೆ |
ಸಂಭ್ರಮದ ಶಿಶುವು ನೆಗದಾಡೇ ||
ಇಂಬು ದೊರಕುವುದುಂಟೆ | ಹಂಬಲವ ತ್ಯಜಿಸು ಸರ |
ವೆಂಬುವುದು ಸ್ವಪ್ನ ಸಿಕ್ಕುವಡೇ || ೭ || || 309 ||

**ಭೈರವಿ – ಅಷ್ಟ**
ಸರವು ಎನ್ನೊಳಗಿಹುದು | ನೋಡಿದ ಗೆದ್ದು |
ಧುರದೊಳು ಕೊಂಡೊಯ್ವುದು ||
ಬರಿದೆ ಹೆಮ್ಮೆಯ ಮಾತ | ಒರೆದರೆ ಬಿಡೆನೆಂದು |
ಶರವರ್ಷಗರೆದನಂದು || ೧ ||

ಶರವಾ ತರಿದು ಸಚಿವ | ಪೇಳಿದನು ಬ |
ವರದಿ ನಿನ್ನನು ಗೆಲುವ ||
ಪರಿ ಯಾವ ದೊಡ್ಡದು | ಮರುಳೆ ಸಾಯದಿರೆಂದು |
ಜರೆದನೀ ಪರಿಯೊಳಂದು || ೨ ||

ಎನಲಾ ಮಾತನೆ ಕೇಳುತ | ರೋಷವ ತಾಳಿ |
ಘನ ಶರವನೆ ಪೂಡುತ ||
ತನಯರಂದವನೀಗ | ನಿನಗೆ ತೋರುವೆನೆಂದು |
ಧನುವ ಖಂಡಿಸಿದನಾಗ || ೩ || || 312 ||

**ಭಾಮಿನಿ**
ಕರದ ಧನು ಮುರಿಯಲ್ಕೆ ಮಂತ್ರಿಯು |
ಹರಹರಾ ಎಂದೆನುತ ಚಿಂತಿಸು |
ತಿರದೆ ಮುಂದಿವರೊಡನೆ ಯುದ್ಧದಿ ಗೆಲುವ ಬಗೆ ಎಂತೋ ||
ತರಳರನು ತಾ ತರುವೆನೆನುತಲಿ |
ಬರಿದೆ ಭಾಷೆಯನೊರೆದು ಬಂದಿಹೆ |
ವಿರಚಿಸುವೆನಿದಕೊಂದುಪಾಯವನೆನುತ ಯೋಚಿಸಿದ || ೧ || || 313 ||

**ತುಜಾವಂತು – ಆದಿ (ದಾನವರ್ಗಿಂತೆನುತಾಗಾ | ಚೆಲ್ವ | ಮಾನಿನಿ ತಾನತಿ ಬೇಗಾ ಎಂಬಂತೆ)**
ಧುರವನೆ ನಾ ಮಾಡಿ ಮಾಡಿ | ಮುಂದ |
ಕ್ಕಿರದೆ ಪೋಗಲು ನೋಡಿ ನೋಡಿ ||
ಹರುಷದಿ ತರಳರು | ಬರುವರು ಪಿಂದಕೆ |
ಬೆರಸುತಲೆನ್ನನು | ಪುರವರಕ್ಕಿದು ನಿಜ || ಧುರವನೆ ನಾ || ಪ ||
ಪುರಬಾಹ್ಯೆಗಾಗಿ ಬಾಲರನು | ಒಯ್ದು |
ಹರುಷವ ಗೊಳಿಸಿ ರಾಜನನು ||
ಒರೆದ ಭಾಷೆಯನು ತೀರ್ಚುವೆನು | ಎನು |
ತಿರದೆ ನಿಶ್ಚೈಸಿ ಮನವನು ||
ಭರದಿಂದಲಿ ಧುರ | ವಿರಚಿಪ ತೆರದೊಳು |
ಸುರಗಿಯನಾಕ್ಷಣ | ಧರಿಸಿದ ಕರದೊಳು ||
ಧುರವನೆ ನಾ ಮಾಡಿ ಮಾಡಿ || ೧ ||

ಬರುತ ಬಾಲರ ಮುಂದೆ ನಿಂದೂ | ಪೇಳ್ದ |
ಕರದ ಧನುವು ಪೋದುದೆಂದು ||
ಹರುಷಗೊಳ್ಳದಿರಿ ನೋಡಿಂದು | ಇದೆ |
ಸುರಗಿಯೊಳಗೆ ನಿಮ್ಮ ಕೊಂದು ||
ಧುರ ಜಯದಿಂದಲಿ | ವರಹಮಾಲೆಯನು ಕೊಂ |
ಡಿರದಯ್ವುವೆನೆನೆ | ಉರಿಗೊಳುತೆಂದರು || ಧುರವನೆ || ೨ || || 315 ||

**ಸಾಂಗತ್ಯ - ರೂಪಕ**
ಬಲ್ಲೆ ನೀ ಬಾಯಬಡಿಕನೆಂದು ತಿಳಿದು ನಾವ್ |
ಕೊಲ್ಲದೆ ಬಿಟ್ಟ ಕಾರಣದಿ ||
ಸಲ್ಲದಾ ನುಡಿಯನಾಡುವೆ ನಿಲ್ಲು ನಿಲ್ಲೆಲೊ |
ಖುಲ್ಲ ಪೋಗದಿರ್ಮುಂದೆ ಜವದಿ || ೧ ||

ರಟ್ಟೆಯ ಕಟ್ಟಿ ನಿನ್ನನು ಗೋಳುಗುಟ್ಟಿಸು |
ತಟ್ಟುವೇವ್ ಬಂದಂತೆ ಪಿಂದೆ ||
ಥಟ್ಟನೆ ನಿಲ್ಲು ನಿಲ್ಲೆನುತ ಘರ್ಜಿಸುತ ಬೆ |
ನ್ನಟ್ಟಿ ಕೊಂಡೊಯ್ದರು ಬಿಡದೆ || ೨ ||

ಮುಂದೂ ಮುಂದಕೆ ಪೋದರವನನ್ನ ಪಿಡಿಯುವ |
ಸಂದರ್ಭವನೆ ನೋಡಿ ಬೇಗ ||
ಕುಂದದೆ ಪೋಗುತ್ತಿರಲು ಮುಂದೆ ತೋರ್ದುದು |
ಸೌಂದರ್ಯ ಕೇರಳವಾಗ || ೩ || || 318 ||

**ಭಾಮಿನಿ**
ಪುರವರವ ನೋಡುತ್ತ ಮಂತ್ರಿಯು |
ಕರದ ಸುರಗಿಯ ಬಿಸುಟು ಮನದೊಳು |
ಒರೆದ ಭಾಷೆಯು ಸಂದುದೊಮ್ಮೆಗೆನುತ್ತ ಹರುಷಿಸುತ ||
ತರಳರನು ಪಿಂದುಳುಹಿ ಮುಂದಕೆ |
ತೆರಳಿ ನಗರವ ಪೊಕ್ಕು ರಾಜನ |
ಮೆರೆವ ಒಡ್ಡೋಲಗದಿ ನಮಿಸುತ ಒರೆದನಿಂತೆನುತ || ೧ || || 319 ||

**ಮಾರವಿ - ಏಕ**
ಲಾಲಿಸು ಕೇರಳ | ಪಾಲನೆ ನಿನ್ನೊಳು |
ಪೇಳುವ ನುಡಿಗಳನು ||
ಬಾಲರ ತಂದಿಹ | ಊಳಿಗವನು ನೀ |
ಕೇಳು ಜಗದೊಳಿನು || ೧ ||

ಧುರದೊಳಗವರನು | ಪರಿಭವಿಸುವರ್ಯಾ |
ರಿರುವರೊ ಲೋಕದೊಳು ||
ಒರೆದ ಭಾಷೆಯ ತೆರ | ತರಳರನಿರದೆ ನಾ |
ಕರೆತಂದಿಹೆನು ಕೇಳು || ೨ ||

ಪುರಬಾಹ್ಯೆಯೊಳಿರು | ತಿರುವರು ನೀ ಕೇಳ್ |
ಧುರಕನುವಾಗದಿರೆ ||
ಹರುಷದಿ ಕೋಟೆಯ | ಮುರಿದೈತಪ್ಪರು |
ತರಳರು ಭಳಿ ಭಳಿರೆ || ೩ || || 322 ||

**ಸೌರಾಷ್ಟ್ರ - ತ್ರಿವುಡೆ**
ಕೇಳುತಾಗಲೆ ನುಡಿಯ ರೌದ್ರ ಕ |
ರಾಳಭೈರವನಂತೆ ಘರ್ಜಿಸಿ |
ಪೇಳಿದನು ಸಭೆಯೆಲ್ಲ ನಡುಗುವ | ವೋಲಿದರನು || ೧ ||

ಸಂಗರದಿ ತರಳರೊಳು ಸೋತು ರ |
ಣಾಂಗಣದಿ ಮುರಿದೋಡಿ ಬಂದ ಪ್ರ |
ಸಂಗವನು ಬಿತ್ತರಿಸಲಿಕೆ ಮನ | ಭಂಗಗೊಳದೆ || ೨ ||

ಎನುತಮಾತ್ಯನ ಜರೆದು ತಕ್ಷಣ |
ಘನತರದ ಸೇನೆಯನೆ ಕೂಡಿಸು |
ತನುವರಕೆ ಪೊರವಂಟ ತನ್ನಯ ಅನುಜನೊಡನೆ || ೩ ||

ಅನುಜನಾ ನಕ್ಷತ್ರಧ್ವಜನತಿ |
ಘನತೆಯೊಳು ಬಲ ಕೂಡಿ ಮುಂದಾ |
ತನಯರನು ನೋಡುತ್ತ ನುಡಿಸಿದ | ವಿನಯದಿಂದ || ೪ || || 326 ||

**ಸಾವೇರಿ - ಅಷ್ಟ**

ತರಳರಾಗಿರುವಿರಿ ನಿಮಗೆ | ಬುದ್ಧಿ |
ಯೊರೆಯುವೆ ನಾ ಕೇಳಿ ಹೀಗೆ ||
ಧುರಕನುವಾಗುವ | ಪರಿಯನ್ನೆ ಬಿಟ್ಟೀಗ |
ಹರುಷದಿ ತೆರಳಿರಿ | ಪುರವರಕ್ಕತಿಬೇಗ || ೧ ||

ಬಾಲರೆಂಬೀ ಮಾತು ನಿಜವು | ನಿಮ್ಮ |
ಸೋಲಿಸಿ ರಣದಿ ಗೆಲ್ಲುವೆವು ||
ಪಾಲಿಸಬೇಕೆಂಬಿ | ಚ್ಛೆಯು ನಿನಗಿದ್ದರೆ |
ಲೀಲೆಯೊಳಣ್ಣಗೆ | ರಗಲು ಬಿಡುವೆ ಖರೆ || ೨ ||

ಎರಗುವೆ ನೋಡೆನುತಾಗ | ಲತಿ |
ಹರುಷದಿ ಶರ ಗೊಂಡು ಬೇಗ ||
ತರಳ ಕಮಲಧ್ವಜ | ಗಿರದೆ ಪೂಡಲು ಶರ |
ತರಿದು ಬೊಬ್ಬಿರಿದಿಹ | ಪರಿಯನೆ ಪೊರೆವೆನು || ೩ || || 329 ||

**ಘಂಟಾರವ - ಅಷ್ಟ**

ನಿಲ್ಲು ನಿಲ್ಲೆಲೋ | ಎನುತ ಕರದೊಳಿಹ |
ಬಿಲ್ಲ ಕಡಿದನು ಕಮಲಧ್ವಜನತಿ |
ಮಲ್ಲ ಸಾಹಸದಿಂದಲಿ || ೧ ||

ಕರದ ಚಾಪವು | ಮುರಿಯಲಾಕ್ಷಣದೊಳು |
ಭರದಿ ಗದೆಗೊಂಡಿರದೆ ಪೊಯ್ದನು |
ಭರಿತ ರೋಷದಿ ಉಡುಧ್ವಜ || ೨ ||

ಗದೆಯ ಹೊಯ್ಲಿಗೆ | ಎದೆಯಾರಿ ಮದವೇರಿ |
ಕುದಿಗೊಳುತ ಗದೆ ಪಿಡಿದ ಕರವನು |
ಸದೆದು ರಟ್ಟೆಯ ತರಿದನು || ೩ ||

ಕರವು ಪೋಗಲು | ಭರಿತ ರೋಷವನಾಂತು |
ತರಹರಿಸುತ್ತೈತಂದು ವದ್ದಿದ |
ಭರಕೆ ಭೂತಳ ನಡುಗಿತು || ೪ || || 333 ||

**ಭಾಮಿನಿ**

ವೀರನಿವನೀ ಲೋಕದೊಳು ಬಹು |
ಧೀರನಾಗಿಹನೆಂದು ಪೊಗಳುತ |
ಶೂರ ಶರಸಂಧಾನವೆಸಗುತ ಶಿರವ ತರಿಯಲ್ಕೆ ||
ಸೂರಿಯನ ಪ್ರಭೆಯಂತೆ ಮೇಲಕೆ |
ಪಾರಿದಾತ್ಮ ಜ್ಯೋತಿ ದಿವ್ಯಾ |
ಕಾರವನು ನೋಡುತ್ತ ಕರೆದರು ಸುರರು ಪೂಮಳೆಯ || ೧ || || 334 ||

**ನಾದನಾಮಕ್ರಿಯೆ - ಅಷ್ಟ**
ನಕ್ಷತ್ರಧ್ವಜನು ತಾ ಮಡಿಯಲು | ಇದ |
ನೀಕ್ಷಿಸಿ ಸಚಿವ ತಾ ದೃಢದೊಳು ||
ಅಕ್ಷಿಗಳೊಳು ಕಿಡಿ ಗೆದರುತ | ಬಂದ |
ನಾ ಕ್ಷಣ ಹುಡುಗರ ನುಡಿಸುತ || ೧ ||

ತರಳಾಗೀರ್ಪಿರಿ ಕಂಡಡೆ | ನಿಮ್ಮ |
ಧುರದೊಳು ಕೊಲ್ಲುವೆನೆಂದಡೆ ||
ಹರುಷಗೊಳ್ಳದು ಮನವೆನ್ನದು | ಬಂದ |
ತೆರದಿ ಹಿಂದಕೆ ನೀವು ತೆರಳ್ವುದು || ೨ ||

ತರಳರಾಗಿರುವೆವು ನಿಶ್ಚಯ | ನಿನ್ನ |
ಧುರದೊಳು ಕೊಲ್ವುದೇನಾಶ್ಚರ್ಯ ||
ಮರುಳೆ ಸಾಯದಿರು ನೋಡೆನ್ನುತ | ಪೊಸ |
ಸರಳೆಸೆದನು ಕಿಡಿಗೆದರುತ || ೩ ||

ಬರುವ ಸರಳ ಕೊಚ್ಚಿ ಕೆಡಹಲು | ಕಾಣು |
ತ್ತಿರದೆ ತರಳನತಿ ಭರದೊಳು ||
ಉರುತರದಸ್ತ್ರವನೆಸೆಯುತ್ತ | ಶಿರ |
ತರಿದನು ನಸುನಗೆಯಾಡುತ್ತ || ೪ || || 338 ||

**ವಾರ್ಧಕ**
ಇನಿತು ಬಾಲಕರಿಬ್ಬರೇ ಕೂಡಿ ರಣದೊಳಗೆ |
ಘನ ಪರಾಕ್ರಮಿಯಾದ ಸಚಿವನುಡುಧ್ವಜ ಸಹಿತ |
ಗಣನೆಯಿಲ್ಲದ ಸೇನೆಯಂ ಕೊಂದು ಮೆರೆದೀರ್ಪರೆನುವ ವಾರ್ತೆಯನೆ ಕೇಳಿ ||
ಮನದೊಳಗೆ ಕಳವಳಿಸುತಾಗಲಾ ಭೂಪಾಲ |
ಚಿನುಮಯನ ಧ್ಯಾನಿಸುತ ರಣಕೆ ಬರಲಿದ ತಿಳಿದು |
ತನಯರೊಳು ಪಿರಿಯ ಮಾರ್ತಾಂಡತೇಜನು ಯುದ್ಧಕನುವಾಗುತಿಂತೆಂದನು || ೧ || 339 ||

**ಶಂಕರಾಭರಣ - ಮಟ್ಟೆ**
ಎಲವೊ ನಿನ್ನ ಬಲದ ಸುಭಟ |
ರ್ಮಲತು ಮಡಿದು ಪೋದರೀಗ |
ಕಲಹದಲ್ಲಿ ನಿನ್ನ ನಾವು | ಕೊಲುವುದನುಚಿತ ||
ಕಲಹದಲ್ಲಿ ನಿನ್ನ ನಾವು |
ಕೊಲುವುದನುಚಿತೆಂದು ಪೇಳ್ವೆ |
ತೊಲಗು ಶರಣನಾಗಿ ನಿನ್ನ | ತಲೆಯನುಳುಹಿಕೊ || ೧ ||

ಬಿಡು ಬಿಡೆಲವೊ ನಿಮ್ಮ ಶೌರ್ಯ |
ಕಡುಹ ಬಲ್ಲೆ ಕಳ್ಳತನದಿ |
ಮಡದಿ ಶಶಿಪ್ರಭೆಯ ಮಾಲೆ | ದುಡಿದ ನೀಚರು ||
ಮಡದಿ ಶಶಿಪ್ರಭೆಯ ಮಾಲೆ |
ದುಡಿದ ನೀಚರೀಗ ನಿಮ್ಮ |
ಕೆಡಹಿ ರಣದಿ ಪಡೆವೆ ಕದ್ದ | ಒಡವೆ ನಿಶ್ಚಯ || ೨ || || 341 ||

**ಮೆಚ್ಚು - ಅಷ್ಟ**

ಬಂದೆಯಾ ರಣಕೆ ಸ್ತ್ರೀಯಳ ಮಾತ | ಕೇಳಿ |
ನಿಂದೆಯಾ ಧುರಕ್ಕನುವಾಗುತ್ತ ||
ಹಿಂದೆ ರಾವಣಗೆ ಶೂರ್ಪಾನಖಿ | ದೆಶೆ |
ಯಿಂದಾದ ಪರಿಯೆ ನಿನ್ನಯ ಗತಿ || ೧ ||

ಕಳ್ಳತನದಿ ಸೀತಾದೇವಿಯ | ವೊಯ್ದ |
ಪಳ್ಳು ರಾವಣಗೆಣೆ ನಿನ್ನಯ ||
ಡೊಳ್ಳು ಸಿಗಿದು ಕದ್ದ ಸರವನ್ನು | ಕಿತ್ತು |
ಕೊಳ್ಳುವೆ ನೋಡು ಯುದ್ಧದೊಳಿನ್ನು || ೨ ||

ವರಹಮಾಲೆಯ ಹಂಬಲ್ಯಾತಕೆ | ನಿನ್ನ |
ಧುರದಿ ತಲೆಯ ಗೊಂಬೆ ಬಾಣಕೆ ||
ಹರುಷದಿ ಭೂತಗಣಕೆ ನಾನೂ | ಹಬ್ಬ |
ವಿರಚಿಸುವೆನು ಒಂದೇ ಕ್ಷಣಕಿನ್ನು || ೩ ||

ತರಳನಾಗಿಹೆ ನಿನ್ನ ಕೊಲ್ಲಲು | ಮನ |
ಕರಕರೆಗೊಳ್ಳುವುದೀಗಲು ||
ಶರಣನಾದರೆ ನಿನ್ನ ರಕ್ಷಿಸಿ | ಮುಂದೆ |
ಪೊರೆಯುವೆ ತಪ್ಪನು ಪಾಲಿಸಿ || ೪ ||

ಮರುಳೆ ನಾ ತರಳನಾದರೆ ಏನು | ಸಾಯೆ |
ಗರಳ ಬೇಕೆಷ್ಟು ಪೇಳೆಲೊ ನೀನು ||
ಕಿರಿದಿಹ ಬೆಂಕಿ ಘೋರಡವಿಯ | ಸುಟ್ಟು |
ಉರಿಸುವ ಪರಿಯ ನೀನರಿಯೆಯ || ೫ ||

ಉರಿಯ ಬಲ್ಲೆನು ನೋಡೆನುತ್ತಲಿ | ಪೊಸ |
ಸರಳೆಸೆದನು ಗುರಿ ಇಡುತಲಿ ||
ಪರಿಹಾರವಿದ್ದಡೆ ಮಾಡಿಕೊ | ಅದ |
ನರಿಯದಿದ್ದಡೆ ದೈವ ಬೇಡಿಕೊ || ೬ ||

ಬೇಡಿಕೊಂಬೆನು ನಿನ್ನ ಶಿರವನ್ನು | ಕೈ |
ಗೂಡಿಸೆನುತ ಹರಿಯೊಳು ನಾನು ||
ನೋಡು ನೋಡೆನುತ ತಕ್ಷಣದೊಳು | ಶರ |
ಪೂಡಿ ಸಾರಥಿಯನ್ನೆ ಕೆಡಹಲು || ೭ || || 348 ||

**ಭಾಮಿನಿ**

ಸಾರಥಿಯು ಮಡಿಯಲ್ಕೆ ರೋಷದಿ |
ತೇರ ನಡೆಸುತ ಯುದ್ಧಗೈಯ್ಯುವ |
ಧೀರತನವನೆ ಕಂಡು ರಥ ಶರವಿರದೆ ಖಂಡಿಸಲು ||
ತೋರಿದುದು ರಣದೊಳಗೆಯಪಜಯ |
ಮೀರಿದುದು ಮನಧೈರ್ಯ ಕಳವಳ |
ತೋರುತಿರಲಿಂತೆನುತ ವ್ಯಥೆಗೊಂಡನು ರಣಾಂಗಣದಿ || ೧ || || 349 ||

**ಆನಂದ ಭೈರವಿ - ಏಕ**
ಪರಪರೀ ಸಮರದೊಳು | ಕರ ಬದ್ಧನಾದೆ |
ಅರಿಗಳಾ ಯುದ್ಧದೊಳು ||
ತರಳ ಪುಟ್ಟಿದ ಘಳಿಗೆ | ತಾರೆಯ ಫಲ |
ಧುರದೊಳೊದಗಿತೆ ಹೀಗೆ || ೧ ||

ಸ್ತ್ರೀಬುದ್ಧಿ ಪ್ರಳಯಾಂತಕ | ವೆನ್ನುವ ತೆರ |
ಶೋಭಿಸಿತೇನಧಿಕ ||
ಈ ಬವರದೊಳು ನಾನು | ಗೆಲ್ಲುವೆನೆಂಬಾ |
ಸಾಭಿಲಾಷೆಗಳಿನ್ನೇನು || ೨ ||

ಅನುಜಾದಿ ಮಂತ್ರಿ ಹಿತರು | ಸೇನೆ ಸಹಿತಾ |
ಎನಗಾಗಿ ಪ್ರಾಣವಿತ್ತರು ||
ಅನುಮಾನವೇಕೆ ರಣದಿ | ತನುವನರ್ಪಿಸುವೆ |
ದನುಜಾರಿ ಪದಯುಗದಿ || ೩ ||

ಅರಿಗಳೋಳ್ ಖಾಡಾಖಾಡಿ | ಯುದ್ಧವ ಮಾಡಿ |
ಸುರರಾ ಮೆಚ್ಚಿಸುವೆ ನೋಡಿ ||
ಧುರಕೆ ನಾ ಬೆದರಿ ಇನ್ನು | ಪೋದರೆ ಹಿಂದೇ |
ಪರಮ ಪಾತಕಿಯಪ್ಪೆನು || ೪ || || 353 ||

**ಭಾಮಿನಿ**
ಎನುತ ನಿಶ್ಚಯಿಸುತ್ತ ಮನದೊಳು |
ನೆನೆದು ಶ್ರೀಹರಿಯಂಘ್ರಿಕಮಲವ |
ಘನ ಪರಾಕ್ರಮಿ ಬಂದು ನಿಂತನು ಸಮರಕನುವಾಗಿ ||
ತನಯರಿದ ನೋಡುತ್ತಲಾಕ್ಷಣ |
ಧನುವ ಝೇಂಕೃತಿಗೈದು ಬಂದಾ |
ಜನಪನಿದಿರೊಳು ನಿಂದು ನುಡಿದರು ಸಲೆ ಪಚಾರಿಸುತ || ೧ || || 354 ||

**ಪಂತುವರಾಳಿ – ಮಟ್ಟೆ (ನಡಿ ಎಲೋ ಮುರಾರಿ ಸುಖದೊಳೂ ಎಂಬಂತೆ)**
ಪೋಗು ಪೋಗು ಬೇಗ ಸುಖದೊಳು | ಎಮ್ಮೊಡನೆ ಸಮರ |
ಸಾಗದಿದುವೆ ನೋಡು ಮನದೊಳು || ಪ ||
ಶರವಿಹೀನ ರಥವಿಹೀನ ನೋಡಲ್ಕೆ ನಿನ್ನ |
ಕರುಣ ಪುಟ್ಟುತಿಹುದು ಪೇಳ್ವೆನು ||
ಪರಮ ಧಾರ್ಮಿಕನೆಂಬ |
ಬಿರುದು ಇರುವುದೀಗ ನಿನಗೆ |
ತರಳರೊಡನೆ ಸೋತೆನೆಂಬ |
ಬರಿಯ ಮಾತು ಬರುವುದಕಟ || ಪೋಗು ಪೋಗು || ೧ ||

ನಿನ್ನ ತಮ್ಮನನ್ನು ತರಿದೆವು | ಮತ್ತಿರದೆ ಸಂ |
ಪನ್ನ ಸಚಿವನನ್ನು ಕೊಂದೆವು ||
ಮುನ್ನ ಯುದ್ಧದೊಳಗೆ ನಾವು |
ನಿನ್ನ ಕೊಲ್ಲದೆಂದೂ ಬಿಡೆವು |
ಪನ್ನಿ ಎಂದು ತಿಳಿಯಬೇಡ |
ಎನ್ನ ಮಾತು ನಡೆಸು ಖಾಡ || ಪೋಗು ಪೋಗು || ೨ || || 356 ||

**ಭೈರವಿ – ಅಷ್ಟ**
ತರಳರಂದುದ ಕೇಳುತ | ಆರ್ಭಟಿಸಿ ಮ |
ತ್ತಿರದೆ ಪೇಳಿದನಿನಿತ ||
ಧುರದೊಳು ಶರಮಿಲ್ಲ | ದಿರೆ ನಿಮ್ಮ ಬಿಡುವೆನೆ |
ಕರದಿ ಹೊಯ್ದೊರಸುವೆನು || ೧ ||

ಎನಲಾ ಮಾತನೆ ಕೇಳುತ | ಮಾರ್ತಾಂಡತೇ |
ಜನು ಪೇಳ್ದ ತಾ ನಗುತ ||
ನಿನಗೆ ರಣದಿ ಜಯ | ವೆನುವುದು ಸ್ವಪ್ನವೆಂ |
ದೆನುತ ಶರವ ಪೂಡಿದ || ೨ ||

ಬರುವ ಶರವ ಪಿಡಿದು | ಮೇಧಾವಿ ತಾ |
ನಿರದೆ ಭೋರ್ಗರೆದು ನಿಂದು ||
ಕರ ಮುಷ್ಟಿಯಿಂದಲೆ | ಎರಗಲಾಕ್ಷಣ ಘರ |
ಘರನೆ ತಿರುಗಿ ಬಿದ್ದನು || ೩ ||

ಚೇತರಿಸುತಲೆ ಎದ್ದು | ಶರವ ಪೂಡೆ |
ಭೂತಳ ನಡುಗಿದುದು ||
ಖ್ಯಾತ ಮೇಧಾವಿಯ | ಗಳವ ಕತ್ತರಿಸೆ ಶ್ರೀ |
ನಾಥ ಜಪದೊಳೀರ್ದುದು || ೪ || || 360 ||

**ಭಾಮಿನಿ**
ಶಿರವು ಶ್ರೀ ಹರಿ ಕೃಷ್ಣ ಎನುತಲಿ |
ಭರದಿ ನಭಕಡರಲ್ಕೆ ಮುಂಡವು |
ತರಹರಿಸುತ್ತೈತಂದು ಪೊಯ್ದುದು ತರಳರನು ಪುಡುಕಿ ||
ಧರೆಯೊಳಗೆ ವೀರರ ಪರಾಕ್ರಮ |
ವರೆಯುವರೆ ಸಾಹಸ್ರುಗ್ರೀವನಿ |
ಗರಿಯದೆನೆ ಹೊಯ್ದಿದರು ಸುರರಂಬರದಿ ದುಂದುಭಿಯ || ೧ || || 361 ||

**ವಾರ್ಧಕ**
ಇಂತು ರಣದೊಳು ಮಡಿದ ವಾರ್ತೆಯಂ ಕೇಳುತಾ |
ಕಾಂತೆ ಗುಣಮಣಿ ಚಿತ್ರಭಾನು ಮೂರ್ಛಿಸುತೆದ್ದು |
ಬಂತು ಹಾ ದೆಶೆಯೆನುತ ಒಡಲ ಹೊಯ್ಕೊಳುತಾಗ ಚಿಂತೆಯೋಳ್ಪಿದ್ದೇಳುತ ||
ಕಾಂತನಿಹ ಸ್ಥಳವ ಕಂಡರಸುತ್ತೈತರುತಲಾ |
ದ್ಯಂತಗುಣಗಣವ ಸರಿಗೊಳಿಸಿ ಪೊಗಳುತಲಂದು |
ಸಂತಸದಿ ಬಿದ್ದಿರುವ ಪತಿಯಂಘ್ರಿಕಮಲವನ್ನಾಂತು ದುಃಖಿಸುತೆಂದಳು || ೧ || || 362 ||

**ಆನಂದ ಭೈರವಿ - ಏಕ**
ಹರಹರ ಪ್ರಾಣನಾಥ | ತೊರೆದು ಎನ್ನ |
ತೆರಳೂವದೇನ್ವಿಹಿತ ||
ಸರಸದ ಮಧುರ ಮಾತ | ನಾಡುತ ಎನ್ನ |
ಹರುಷವಗೊಳಿಸು ಪ್ರೀತ || ೧ ||

ಮಾತಾಪಿತರ ತೊರೆದು | ನಂಬಿಹೆ ನಿನ್ನ |
ಪ್ರೀತಿಯೋಳ್ಪೊರೆಸುತಿಂದು ||
ಮಾತಾಡದಿರಬಹುದೆ | ಎನ್ನೊಳು ಪ್ರಾಣ |
ನಾಥಾ ಯಾತಕೆ ಮುನಿದೆ || ೨ ||

ತರುಣಿ ಶಶಿಪ್ರಭೆಯ | ಮಾತನ ಕೇಳಿ |
ಧುರದಿ ಮಡಿದೆಯೊ ಪ್ರಿಯ ||
ಪರರ ದೂರಲಿನ್ನಾರಿಗೆ | ಮಾಡಿದ ಕರ್ಮ |
ಭರದಿ ಬೆನ್ನಟ್ಟಿತ್ತೀಗೆ || ೩ ||

ಬಾಲ ಚಂದ್ರಹಾಸನ | ಕರುಣದಿ ಶ್ರೀ |
ಲೋಲ ಪೊರೆಯಲಿ ಮುನ್ನ ||
ಕಾಲ ಕಳೆಯದೆ ಇನ್ನು | ಮುಂದಿಗೆ ಅನು |
ಕೂಲೆಯಾಗುವೆನು ನಾನು || ೪ || || 366 ||

**ಭಾಮಿನಿ**

ಸತಿಯರಿಗೆ ಕ್ಷಿತಿಯೊಳಗೆ ಪತಿಯೇ |
ಗತಿ ಎನುತ ಒದರುವುದು ಶ್ರುತಿಸ್ಮೃತಿ |
ಹಿತದಿ ಕೈಕೊಳ್ಳುವೆನು ಪತಿಸಹಗಮನವೆಂದೆನುತ ||
ಮತಿಯುತೆಯು ನಿಶ್ಚೈಸಿ ತಕ್ಷಣ |
ಚಿತೆಯ ವಿರಚಿಸಿ ಪತಿಯೊಡನೆ ತಾ |
ಹುತವಹನದೊಳು ಪೊಕ್ಕಳಾ ಪತಿವ್ರತೆಯು ಬಳಿಕಿತ್ತ || ೧ || || 367 ||

**ದ್ವಿಪದಿ**

ತರಳನಾಗಿಹ ಚಂದ್ರಹಾಸ ಮನೆಯೊಳಗೆ |
ಒರಲುತಿರುವುದ ಕಂಡು ಧಾತ್ರಿ ಮನದೊಳಗೆ || ೧ ||

ಮರುಗಿದಳು ನೋಡಿ ಸಲಹುವರಿಲ್ಲವೆನುತ |
ಎರಡು ತಿಂಗಳ ಪ್ರಾಯ ತುಂಬಿರುವನೀತ || ೨ ||

ಅರಿಗಳಿಗೆ ಜಯವಾದುದಕಟ ಸಮರವಿದು |
ಪುರ ಕೋಶ ಭಂಡಾರವವರಿಗಾಗುವುದು || ೩ ||

ಇನ್ನಿರದೆ ಬಾಲಕನ ಕೊಂಡು ನಾನೀಗ |
ಮುನ್ನ ಕುಂತಳಪುರಕೆ ಸಾಗುವೆನು ಬೇಗ || ೪ ||

ಎನುತ ಯಾರರಿಯದಂದದಿ ಒಯ್ದಳಿವಳು |
ಮನದೊಳಗೆ ಇದನರಿಯದಿವರಿತ್ತಲಿರಲು || ೫ || || 372 ||

**ಭಾಮಿನಿ**

ನೋಡಿದಳು ಸಹಗಮನ ಶಶಿಪ್ರಭೆ |
ಕೂಡೆ ಕಳವಳಗೊಂಡು ಮನದೊಳು |
ಮಾಡಿದಳು ಶಾಂಭವಿಯ ಸ್ತುತಿ ಎಡೆಬಿಡದೆ ದೃಢಮನದಿ ||
ಪಾಡಿದಳು ಸೆರಗೊಡ್ಡಿ ಪೊಗಳುತ |
ಬೇಡಿದಳು ನಿಜರೂಪು ದೋರಿಸಿ |
ರೂಢಿಯೊಳು ಬಂದೀಗ ರಕ್ಷಿಸೆನಲ್ಕೆ ಘುಡುಘುಡಿಸಿ || ೧ || || 373 ||

**ಕಂದ**

ತರುಣಿಯ ಭಕ್ತಿಗೆ ಮೆಚ್ಚುತ |
ಕರುಣದಿ ಘೋರಾಕಾರವ ಧರಿಸುತಲಾಗಳ್ ||
ಭರದಿಂ ಘರ್ಜಿಸೆ ಭುವನವು |
ತರಹರಿಸಿತೊ ಎನೆ ಕಂಗೊಳಿಸಿದಳಾಗಲ್ || ೧ || 374 ||

**ಭೈರವಿ - ಏಕ**
ಬಂದಳಾಗ | ಘರ್ಜಿಸಿ | ನಿಂದಳಾಗಾ || ಪ ||
ಬಂದ ಭರಕೆ ಸುರ | ವೃಂದ ಓಡುವ ತೆರ |
ದಿಂದಲಬ್ಬರಿಸುತ | ನಂದದಿ ಮುಂದಕೆ || ಬಂದ || ಅ. ಪ. ||
ಮೃಡನರಸಿಯು ಸುರ | ಪಡೆಯೋಡುವ ತೆರ |
ಘುಡುಘುಡಿಸುತ ಕೆಂ | ಗಿಡಿಯುಗುಳುತಲಡಿ |
ಇಡುವಬ್ಬರಕೆ ತಳ | ನಡುಗುವಂದದಿ ತಲೆ |
ಜಡೆ ಕೆದರುತ ಭೋ | ರ್ಗುಡಿಸುತ ಭರದೊಳು || ಬಂದಳಾಗ || ೧ ||

ಅಂದವ ನೋಡುತ | ಕಂದಿ ಬಾಲರು ಮನ |
ಗುಂದಿ ನಡುಗಿ ಮುನಿ | ಎಂದ ಮಂತ್ರದ ಜಪ |
ದಿಂದಲಿರಲು ಸಾ | ನಂದದಿ ತರಳೆಯೊ |
ಳಂದು ಪೇಳಿದಳಿಂ | ತೆಂದು ನಿರ್ಭಯದೀ || ಬಂದಳಾಗ || ೨ || || 376 ||

**ಸಾಂಗತ್ಯ - ರೂಪಕ**
ಬಾಲಕಿ ಕೇಳು ನಾ | ಪೇಳುವ ನುಡಿಗಳ |
ಬಾಲರು ಹರಿಭಕ್ತರಿವರು ||
ಶ್ರೀಲಲಾಮನ ದಯ | ವಿರುವದಿವರ ಮೇಲೆ |
ಸೋಲ್ವರಲ್ಲ ರಣದೊಳು || ೧ ||

ಕಾಳಿ ಕರಾಳಿ ಮಾಂ | ಕಾಳಿ ಎಮ್ಮಯ ಶುಭ |
ದೇಳಿಗೆಯನು ಪೇಳಿ ಮುದದಿ ||
ಪಾಲಿಸಬೇಕು ಎಂ | ದೆನುತ ಕಾಲ್ಗೆರಗಲು |
ಲೋಲೆ ಕರುಣದೀ ಎತ್ತುತಲಿ || ೨ ||

ಬಾಲರ ಕರೆದು ಪೇ | ಳಿದಳು ಈ ಸ್ತ್ರೀಯರಾ |
ಲೀಲೆಯೋಳ್ಪರಿಣಯ ಗೈದು ||
ಬಾಳಿ ಸಂತಸದಿ ರಾ | ಜ್ಯವನೆ ಸಂಭ್ರಮದಿಂದ |
ಪಾಲಿಸಬೇಕು ನೀವ್ ಜವದಿ || ೩ ||

ಎನಲಾ ಮಾತನೆ ಕೇಳಿ | ತನಯರೋಳ್ ಪಿರಿಯ ತಾ |
ನನುವರಿದಿಂತೆಂದನಾಗ ||
ಮನ ಬಾರದಿವರು ಗ | ಣಿಕೆಯರಾಗಿರ್ಪರು |
ವಿನಯದೊಳೆಂತೊಲಿಸುವೆವು || ೪ || || 380 ||

**ಮಧುಮಾಧವಿ - ಏಕ**
ವೇಶ್ಯಾಂಗನೆಯರಲ್ಲವು | ಗಣಿಕೆಯರ |
ಆಶೆ ಬೇರಿವರ್ಗಿಲ್ಲವು ||
ಭಾಷೆ ಸಲ್ಲಿಸಿ ಕೀರ್ತಿ | ಶೇಷವ ಘಳಿಪಭಿ |
ಲಾಷೆಯಿಂದಿರುತಿರ್ಪರು | ಈ ಸ್ತ್ರೀಯರು || ೧ ||

ಇವಳ ನೀವ್ವರಿಸಿಕೊಂಡು | ಇರ್ದಡೆ ಮುಂದೆ |
ಇವಳುದರದೊಳ್ಕುಂಕೊಂಡು ||
ಕುವರಿಯೋರ್ವಳು ಪುಟ್ಟಿ | ಬವರದಿ ಕೀರ್ತಿಯ |
ಹವಣಿಸಿಕೊಳ್ಳುವಳು | ಮತ್ತವಳು || ೨ ||

ಸ್ತ್ರೀರಾಜ್ಯಕ್ಕೊಡತಿಯಾಗಿ | ಪ್ರಮೀಳೆಯೆಂದು |
ರಾರಾಜಿಪಳು ಲೇಸಾಗಿ ||
ಮಾರಪಿತನ ಸಖ | ವೀರನರ್ಜುನನೀಗೆ |
ಸೇರುವಳತಿಶಯದಿ | ನಿಶ್ಚಯದಿ || ೩ || || 383 ||

**ಭಾಮಿನಿ**
ಎನ್ನ ಮಾತನೆ ಮೀರದೀಕ್ಷಣ |
ರನ್ನೆ ಶಶಿಪ್ರಭೆ ಭ್ರಮರಕುಂತಳೆ |
ಯನ್ನು ನೀ ವರಿಸುವುದು ಮತ್ತಾ ಕಮಲಗಂಧಿಯನು ||
ನಿನ್ನ ತಮ್ಮನು ವರಿಸಬೇಕಿದ |
ಕಿನ್ನು ಸಂಶಯ ಬೇಡ ಬೇಗದಿ |
ಸನ್ನಿಹಿತ ಗಾಂಧರ್ವ ವಿಧಿಯೊಳು ವಿರಚಿಪುದು ಲಗ್ನ || ೧ || || 384 ||

**ಸೌರಾಷ್ಟ್ರ - ತ್ರಿವುಡೆ**
ಎನುತಲಂತರ್ಧಾನಗಯ್ಯಲು |
ವನಿತೆ ಶಶಿಪ್ರಭೆಯಾಕ್ಷಣದೊಳಾ |
ವಿನಯನಡಿಗೆರಗುತ್ತ ನುಡಿದಳು | ಸನುಮತದೊಳು || ೧ ||

ಎನ್ನ ತಪ್ಪುಗಳನ್ನೆ ಮನದೊಳು |
ಎಣ್ಣಿಸದೆ ಸಕಲರನು ಮುದದೊಳು |
ಮನ್ನಿಸಲು ಬೇಕಿನ್ನುಗುಣಸಂ | ಪನ್ನ ನೀನು || ೨ ||

ಎನಲು ಮನ್ನಿಸುತಾಗಲವಳನು |
ವಿನಯದಿಂ ತೆಗೆದಪ್ಪಿ ಪಿರಿಯನು |
ಘನತರದೊಳೊಡಬಡಿಸಿದನು ತಾ | ನನುನಯದೊಳು || ೩ ||

ಭ್ರಮರಕುಂತಳೆ ಸಹಿತ ಮತ್ತಾ |
ಕಮಲಗಂಧಿನಿಯರನು ಕರೆಸುತ |
ವಿಮಲಗುಣರವರನ್ನು ವರಿಸಿದ | ರ್ಮಮತೆಯಿಂದ || ೪ ||

ಭ್ರಮರಕುಂತಳೆ ಶಶಿಪ್ರಭೆಯನಾ |
ಸಮಯದೊಳು ಪಿರಿಯವನು ವರಿಸಿದ |
ಕಮಲಗಂಧಿಯೊಳ್ ಲಗ್ನವಾದನು | ಕಮಲಧ್ವಜನು || ೫ ||

ಇನಿತು ಸಂತಸದಿಂದಲಿರುತಿರೆ |
ವನಿತೆ ಶಶಿಪ್ರಭೆಯಾಗ ಬಾಲನ |
ನೆನೆದು ಪುಡುಕಿದಳ್ ಚಂದ್ರಹಾಸನ | ವಿನಯದಿಂದ || ೬ ||

ಕಾಣದಿರೆ ಕಳವಳಿಸಿ ಮನದೊಳು |
ಮಾನಿನಿಯು ಚಾರಕರ ಬೆರಸಿದ |
ಳೇನನೆಂಬೆನು ತರುಣನೆಲ್ಲಿಯು | ಕಾಣದಾದ || ೭ || || 391 ||

**ದ್ವಿಪದಿ**
ವಿಮಲಗುಣ ಪಿರಿಯ ಸ್ತ್ರೀರಾಜ್ಯಪತಿಯಾದ |
ಕಮಲಧ್ವಜ ಕೇರಳಕ್ಕೊಡೆಯನೆನ್ನಿಸಿದ || ೧ ||

ಇಂತು ಸಂತಸದೊಳಿರುತಿರಲೊಂದು ದಿನದಿ |
ಚಿಂತಿಸಿದರ್ಪಿತನಂಘ್ರಿ ನೆನೆನೆನೆದು ಮನದಿ || ೨ ||

ಮಾತೆ ಪಿತರನು ಕಾಂಬ ಉತ್ಸಹದೊಳಾಗ |
ನೂತನದ ಬಿರಿದು ಸೇನೆಯ ಗೊಂಡು ಬೇಗ || ೩ ||

ಪೊರಟರಲ್ಲಿಂದ ಪದ್ಮಾಖ್ಯಪುರವರಕೆ |
ಬರಲು ಸಂತೋಷಮಾದುದು ಪುರದ ಜನಕೆ || ೪ ||

ನೋಡಿದರು ಪಿತನಂಘ್ರಿ ಹರುಷಪರರಾಗಿ |
ಮಾಡಿದರು ಸಾಷ್ಟಾಂಗ ಸತಿಯರ್ಸಹಿತಾಗಿ || ೫ ||

ಪಿತನು ಬಿಗಿದಪ್ಪಿದನು ಹರಸಿ ಸಂತಸದಿ |
ಸುತರ ಮುದ್ದಿಸಿದನಂತಃಕರುಣ ದಯದಿ || ೬ ||

ಮಾತೆಯಂಘ್ರಿಗೆ ನಮಿಸೆ ಸುತ ಸೊಸೆಯರ್ಗಾಗ |
ನೂತನದಿ ಮಂಗಲವನೆಸಗಿದಳು ಬೇಗ || ೭ || || 398 ||

**ಸುರುಟಿ – ಏಕ (ಕ್ಷೀರವಾರುಧಿ ಸುತೆಗೆ ಎಂಬಂತೆ)**
ಕುಮುದಬಾಂಧವತೇಜಗೆ | ಮತ್ತಾ |
ವಿಮಲ ಶಶಿಪ್ರಭೆಗೆ ||
ಭ್ರಮರಕುಂತಳೆಯಳಾ | ಶ್ರಮವ ನಿವಾರಿಸಿ |
ಕ್ರಮದಿ ಬಂದಿಹ ವಿ | ಕ್ರಮ ಶೌರ್ಯಗೆ ಈ |
ಸಮಯದೊಳಾರತಿಯಾ | ಬೆಳಗೀರೆ || ಶೋಭಾನೆ || ೧ ||

ತನಯ ಕಮಲಧ್ವಜಗೆ | ಬಿಸಜ ವ |
ದನೆ ಕಮಲಗಂಧಿನಿಗೆ ||
ಮನುಮಥ ರೂಪಗೆ | ಸನುಮತವಾದ ಸು |
ಗುಣಮಣಿಯಾಗಿಹ | ವನಿತೆಯರ್ಕೂಡುತ |
ವಿನಯದೊಳಾರತಿಯಾ | ಬೆಳಗೀರೆ || ಶೋಭಾನೆ || ೨ || || 400 ||

**ಭಾಮಿನಿ**
ತನಯರಿಂಗೀ ಪರಿಯ ಮಂಗಲ |
ವನು ರಚಿಸಿ ಪದ್ಮಿನಿಯು ಸುಖಿಗೊಳೆ |
ಜನಪನಾಗಿಹ ಪದ್ಮಶೇಖರ ಗೈಸಿದನು ವಿಭವ ||
ಇನಿತೆಸೆವ ಸಂತೋಷದಿಂದಲಿ |
ವನಿತೆಯರ ಕೂಡುತ್ತ ತರಳರು |
ಚಿನುಮಯನ ಧ್ಯಾನಿಸುತಲೀರ್ದರು ಘನ ಮಹೋತ್ಸವದಿ || ೧ || || 401 ||

**ಸೌರಾಷ್ಟ್ರ - ತ್ರಿವುಡೆ**
ಇಂತೆಸೆವ ಹರಿಭಕ್ತ ಚರಿತವ |
ಸಂತಸದಿ ಜನಮೇಜಯಗೆ ಶ್ರೀ |
ಕಾಂತಧ್ಯಾನದಿ ಮುನಿಯು ಪೇಳ್ದುದ | ನಂತಮಾಗಿ || ೧ ||

ವಿರಚಿಸಿದೆ ಕನ್ನಡದೊಳಗೆ ನಾ |
ನಿರುವ ಪುರ ಪೆರಡೂರು ದ್ವಿಜಕುಲ |
ವರನೆನಿಸಿ ಮೆರೆದೀರ್ದ ಕೃಷ್ಣರಾ | ಯರ ಕುವರನು || ೨ ||

ಹರುಷದೊಳು ರಘುರಾಮನೆನ್ನುತ |
ಕರೆವರೆನ್ನನು ಲೋಕದೊಳಗಿದ |
ನೊರೆದೆ ಶ್ರೀಹರಿ ಪದ್ಮನಾಭನ | ಕರುಣದಿಂದ || ೩ ||

ಪ್ರಾಕೃತವಿದೆಂದೆನುತ ಮನದಿ ನಿ |
ರಾಕರಿಸದಿದರನ್ನು ಪ್ರಚುರಿಸೆ |
ಲೋಕನಾಥನು ಸಲಹುವನು ಸುಖ | ಶೇಖರಿಸುತ || ೪ || || 405 ||

**ವಾರ್ಧಕ**
ಶಾಲಿವಾಹನಶಕವು ತೋರುವುದು ಸಾವಿರದ |
ಮೇಲೆ ಎಂಟೆರಡು ಮೂರನ್ನೆ ಸಾಲ್ಗೊಳಿಸೆ ಮ |
ತ್ತೇಳರಿಂದ್ಯೆದ ಗುಣಿಸಲ್ಬರ್ಪ ಸಂಖ್ಯೆಯೊಳಗೀರ್ಪ ವತ್ಸರನೆಣಿಪುದು ||
ಕೇಳಿ ನೀವೆರಡೆಸಾರಿಯೊಳ್ನಾಲ್ಕ ಕೂಡಿಸಲು |
ತೇಲಿಬಹುದೀ ಮಾಸ ತಿಥಿಯಾರಕೀ ಕೃತಿಯ |
ಮೇಳವಿಸಿ ಸಂಪೂರ್ಣಗೈಸಿ ಮೆರೆಸಿದ ಹರಿಗೆ ಪೇಳುವೆನು ಮಂಗಳವನು || ೧ || || 406 ||

**ಧವಳಾರ**
ಮಂಗಲಂ | ಜಯ | ಮಂಗಲಂ || ಪ ||
ಮಂಗಲ ಮತ್ಸ್ಯ ಕೂರ್ಮಗೆ ವರಹಗೆ ಜಯ |
ಮಂಗಲ ನರಪಂಚಾನನಗೇ ||
ಮಂಗಲ ವಾಮನ ಭಾರ್ಗವ ರಾಮಗೆ |
ಮಂಗಲ ಕೃಷ್ಣ ಬೌದ್ಧಗೆ ಕಲ್ಕಿಗೇ || ಮಂಗಲಂ ಜಯ || ೧ ||

ಮಂಗಲ ತ್ರೈಗುಣರೂಪನಾಗಿ ಶುಭ |
ಮಂಗಲ ಸುಜನರಿಗೀಯುವಗೇ ||
ಮಂಗಲ ಭಕ್ತರಭೀಷ್ಟವ ಸಲಹುತ |
ಕಂಗೊಳಿಸುವ ಕಾರ್ಕಳವರಗೇ || ಮಂಗಲಂ ಜಯ || ೨ ||

ಮಂಗಲ ಪೆರಡೂರವಾಸ ಪುರೇಶಗೆ |
ಮಂಗಲ ಶ್ರೀ ಜಗಧೀಶನಿಗೇ ||
ಮಂಗಲ ಸಚರಾಚರ ಪರಿಪಾಲಗೆ |
ಮಂಗಲ ರಘುರಾಮಾವರಗೇ || ಮಂಗಲಂ ಜಯ || ೩ || || 409 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಶ್ರೀಮನ್ಮಧ್ವಸಿದ್ಧಾಂತ ಪ್ರಬೋಧಿನಿ ಪುಸ್ತಕ ಭಂಡಾರ, ಉಡುಪಿ - ೧೯೪೯

**ಪ್ರಸಂಗ ಪ್ರತಿ ಆಧಾರ:** ಶ್ರೀಮನ್ಮಧ್ವಸಿದ್ಧಾಂತ ಪ್ರಬೋಧಿನಿ ಪುಸ್ತಕ ಭಂಡಾರ, ಉಡುಪಿ ಪ್ರಕಟಿತ ಕೃತಿ - ೧೯೪೯

**ಪ್ರಸಂಗ ಪ್ರತಿ ಕೊಟ್ಟವರು:** ಹರಿಕೃಷ್ಣ ಹೊಳ್ಳ ಬ್ರಹ್ಮಾವರ

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ರವಿ ಮಡೋಡಿ

**ಅಂತರಜಾಲ ಪ್ರತಿ ಬರವಣಿಗೆ:** ವಸುಮತಿ ಜಿ, ವಿಂಧ್ಯಾಶ್ರೀ ಸೋಮಯಾಜಿ, ಅಜಿತ್ ಕಾರಂತ್

**ಅಂತರಜಾಲ ಪ್ರತಿ ವಿನ್ಯಾಸ:** ವಿಂಧ್ಯಾಶ್ರೀ ಸೋಮಯಾಜಿ, ಅಜಿತ್ ಕಾರಂತ್

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ್ ಉಪ್ಪೂರ

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ:** ರವಿ ಮಡೋಡಿ,  ನಟರಾಜ ಉಪಾಧ್ಯ, ಅಶ್ವಿನಿ ಹೊದಲ